ಶ್ರೀ ವಾಟಾಳ್ ನಾಗರಾಜ್ : ಇಲ್ಲ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪಟೇಲರೇ, ತಾವು ಮುಗ್ಗರಿಸಿ ಬೀಳುತ್ತಿದ್ದೀರಿ. ನಾವು ಕಾಲು ಎಳೆಯಲು ಹೋಗಿಲ್ಲ. ಆದ್ದರಿಂದ ನಿಮ್ಮನ್ನು ನಾವು ಎಚ್ಚರಿಸುತ್ತಿದ್ದೇವೆ.

ಅಧ್ಯಕ್ಷರು : ದಯಮಾಡಿ ಈ ವಿಷಯವನ್ನು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾವು ಯಾರೂ ಉಪ ಮುಖ್ಯಮಂತ್ರಿಗಳ ಕಾಲು ಎಳೆಯಲು ಹೋಗಿಲ್ಲ. ಒಂದು ಮಾತು ಅವರು ಏನು ಹೇಳಿದರು. ಅಂದರೆ ರೈತರನ್ನು ನಾವು ಕೇಳಿದ್ದೇವೆ. ರೈತರ ಜೊತೆಯಲ್ಲಿ ಮಾತನಾಡಿದ್ದೇವೆ. ಯಾವಾಗ ಮಾತನಾಡಿದಿರಿ ಅಂದರೆ ಅವರು ತಕ್ಷಣ ಸಿಟ್ಟು ಮಾಡಿಕೊಂಡು ಅವರ ಅಡ್ರೆಸ್ ಅಮೇಲೆ ಕೊಡುತ್ತೇನೆ ಅಂದರೆ ಹೇಗೆ? ನೀವು ಆ ಧಾಟಿಯಲ್ಲಿ ಹೊರಟುಬಿಟ್ಟರೆ ನಮ್ಮ ಪರಿಸ್ಥಿತಿ ಹೇಗೆ? ನಾವು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ ಭಯ ಭೀತಿ ಬರತಕ್ಕಂಥ ವಾತಾವರಣ ನಿರ್ಮಾಣ ಆಗಿದೆ. ಆ ವಾತಾವರಣದ ಬಗ್ಗೆ ನಾವು ನಿಮಗೆ ಹೇಳುತ್ತಿರುವುದು, ಅಷ್ಟೇ ಹೊರತು ಅದಕ್ಕೆ ಇನ್ನು 15 ದಿವಸದಿಂದ ನೀವು ಭಯ ಬೀಳಿಸುತ್ತೀರಾ ಇದರಿಂದ.

ಅಧ್ಯಕ್ಷರು : ಈಗ ಮಾನ್ಯ ಖರ್ಗೆಯವರು ಮಾತನಾಡಲಿ.

ಗಣಿಕಾರಿಕೆ ಇಲಾಖೆಯಲ್ಲಿ ನಕಲಿ ಪರವಾನಗಿ

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕು ಎಂದು ಹೇಳಿ ನಾನು ತಮ್ಮನ್ನು ಕೇಳಿಕೊಂಡೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ ಅದಕ್ಕೆ ನಾನು ತಮ್ಮನ್ನು ಅಭಿನಿಂದಿಸುತ್ತೇನೆ. ವಿಶೇಷವಾಗಿ ಮೈನ್ಸ ಅಂಡ್ ಜಿಯಾಲಜಿ ಡಿಪಾರ್ಟಮೆಂಟನಲ್ಲಿ ಸುಮಾರು 400ಕ್ಕೂ ಹೆಚ್ಚು ಪರ್ಮಿಟ್ಸನ್ನು ಕೊಟ್ಟಿದ್ದಾರೆ. ಅದರಲ್ಲಿ 100 ಫೇಕ್ ಪರ್ಮಿಟ್ಸ ಅನ್ನು ಇಷ್ಯೂ ಮಾಡಿ ಕೋಟ್ಯಾಂತರ ರೂಪಾಯಿಗಳ ಗ್ರಾನೈಟನ್ನು ಇವತ್ತು ಪರಭಾರೆ ಮಾಡಿದ್ದಾರೆ ಎನ್ನತಕ್ಕಂಥದ್ದು ಬಯಲಿಗೆ ಬಂದಿದೆ. ಮತ್ತು ಅದಕ್ಕೆ ಸರ್ಕಾರದವರು ರಕ್ಷಣೆಯನ್ನು ಕೊಟ್ಟಿದ್ದಾರೆ. ಮತ್ತು ಮಂತ್ರಿಗಳು ಕೂಡ ಓರಲ್ ಇನಸ್ಟೆಕ್ಷನ್ಸ ಕೊಡುತ್ತಿದ್ದಾರೆ ಎನ್ನತಕ್ಕಂಥ ಮಾತು ಕೂಡ ಪತ್ರಿಕೆಗಳಲ್ಲಿ ಅಷ್ಟೇ ಅಲ್ಲ ಒಂದು ಸಕ್ಯುಲರ್ ಮುಖಾಂತರ ಕೂಡ ಇವತ್ತಿನ ದಿವಸ ಅದು ಸಿದ್ಧ ಆಗಿದೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಒಂದು ಕಡೆ ಗ್ರಾನೈಟ್ ನಕಲಿ ಪರ್ಮಿಟ್ ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಇಲ್ಲ ಅವರನ್ನು ಕರೆಯಿಸಿದರೆ ಬಹಳ ಚೆನ್ನಾಗಿರುತ್ತದೆ. ಏಕೆಂದರೆ ಅವರು ಕೇಳುವಂತಹ ಅವಶ್ಯಕತೆ ಇದೆ. ಮತ್ತು ಅವರು ಉತ್ತರ ಕೊಡಬೇಕು, ಮತ್ತು ಸ್ಟೇಟ್‌ಮೆಂಟ್ ಮೊದಲು ಮಾಡತಕ್ಕಂಥಾದ್ದು ಒಳ್ಳೆಯದು. ಇದು ಬಹಳ ಪ್ರಾಮುಖ್ಯವಾದಂತಹ ವಿಷಯ ಇದೆ. ಸುಮಾರು 100 ನಕಲಿ ಪರ್ಮಿಟ್ಸ್ ಹಾಗೂ 100 ಕೋಟಿ ರೂಪಾಯಿಗಳನ್ನು ಜಪ್ತಿ ಮಾಡಿದ್ದುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಖಿರ್ಗಿಯವರೇ, ಮಂತ್ರಿಗಳನ್ನು ಕರೆಯಿಸಿದ ಮೇಲೆ ತಾವು ಪ್ರಸ್ತಾಪ ಮಾಡಿದರೆ, ಚೆನ್ನಾಗಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗಿ : ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಉಪ ಮುಖ್ಯಮಂತ್ರಿಗಳು ಇದ್ದಾರೆ. ಸುಮಾರು 100 ಫೇಕ್ ಪರ್ಮಿಟ್ಸ್ ಇಷ್ಯೂ ಮಾಡಿದ್ದಾರೆ. ಆದಕ್ಕೆ ಸರ್ಕಾರದ ವತಿಯಿಂದ ಪ್ರೋತ್ಸಾಹ ಸಿಕ್ಕಿದೆ ಎನ್ನುವುದಕ್ಕೆ ನಾನು ಇದನ್ನು ಹೇಳುತ್ತಿದ್ದೇನೆ. ಏಕೆಂದರೆ ಇದು ಪೇಪರನಲ್ಲಿ ಎರಡೂ ಕೂಡ ಪ್ರಿಂಟ್ ಆಗಿದೆ. ಒಂದು ಕಡೆ ಫೇಕ್ ಪರ್ಮಿಟ್ಸ ಇನ್ನೊಂದು ಕಡೆ ಅಸಲಿ ಪತ್ರಗಳನ್ನು ಕೂಡ ಪ್ರಿಂಟ್ ಮಾಡಿದ್ದಾರೆ. ಮತ್ತು ಇಂತಹ ಗ್ರಾನೈಟ್ ಪರ್ಮಿಟಗಳನ್ನು ಸಾಮಾನ್ಯವಾಗಿ ಓರಲ್ ಇನಸ್ಟ್ರಕ್ಷನ್‌ನಿಂದ ಕೊಡುತ್ತಿದ್ದರು ಎನ್ನತಕ್ಕಂಥಾದ್ದಕ್ಕೆ ಉದಾಹರಣೆ ಎನು ಎಂದರೆ ಡೈರಕ್ಟರ್ ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟಿನವರೇ ಒಂದು ಸರ್ಕ್ಯೂಲರ್ ಇಷ್ಯೂ ಮಾಡಿದ್ದಾರೆ. ಶ್ರೀಮಾನ್ ಮದನಗೋಪಾಲ್ ಅವರಿಗೆ ಸಂಶಯ ಬಂದು ಅವರು ಏನು ಸರ್ಕ್ಯೂಲರ್ ಇಷ್ಯೂ ಮಾಡಿದ್ದಾರೆ. ಅಂದರೆ ಆ ಸರ್ಕ್ಯೂಲರ್ ಏನು ಹೇಳುತ್ತಿದೆ ಅಂದರೆ.

" It has come to my notice that in some of the important matters of mineral administration, oral orders are issued from the office of the Directorate and also from the office of the Minister for Mines and Geology. This issue was discussed in detail in Zonal meetings held during the month of June 1995 and instructions were issued not to obey oral instructions from any higher ups" .

"not to obey oral instructions from any higher ups``.

ಇದರರ್ಥವೇನೆಂದರೆ, ಇದಕ್ಕಿಂತ ಹಿಂದೆ ಓರಲ್ ಸೂಚನೆ ಕೊಡುತ್ತಿದ್ದರು ಮತ್ತು ಒಬೆ ಮಾಡುತ್ತಿದ್ದರು ಎಂದು ಇದು ನಮ್ಮದಲ್ಲ, ನಿಮ್ಮದು ತಾ: 22-7-95ರಲ್ಲಿ ತಾವು ಇಷ್ಯೂ ಮಾಡಿದ್ದು ಮುಂದೆ ಏನು ಹೇಳುತ್ತೀರಿ ಎಂದರೆ:

``Since duties and responsibilities of the officials in Mineral Administration must be performed within the framework of Mines and Minerals (Regulation and Development) Act 1957, Mineral Concession Rule 1960 Karnataka Mineral Concession Rule 1994. Other Acts and Rules and relevant standing orders and Circulars. Any action taken by any official in the Department ignoring or violating, the provisions of law will be dealt with seriously"

ಇದರರ್ಥವೇನೆಂದರೆ ಹಿಂದೆ ರೂಲ್ಸ ಪ್ರಕಾರ ಅಲ್ಲಿ ಕೆಲಸ ಮಾಡುತ್ತಿರಲಿಲ್ಲ. ಕೇವಲ ಮಿನಿಸ್ಟರ್ ರಿಂದ ಅಥವಾ ಡೈರೆಕ್ಟರೇಟಿಂದು ಏನೇ ಓರಲ್ ಇನಸ್ಟ್ರಕ್ಷನ್ ಬಂದರೂ ನೇರವಾಗಿ ಅವರು

ಇಂಪ್ಲಿಮೆಂಟ್ ಮಾಡುತ್ತಿದ್ದರು. ಅದನ್ನು ತಡೆಗಟ್ಟುವುದಕ್ಕಾಗಿ ಈ ಸರ್ಕ್ಯುಲರ್ ಇಷ್ಯೂ ಮಾಡಿದರೆಂದು ನಾವು ತೆಗೆದುಕೊಳ್ಳಬೇಕಾಗುತ್ತದೆ.

"Keeping this inview, it is instructed that if any oral instructions are issued either from this Office or from the office of the Minister for Mines and Geology, the same may be brought to my notice without fail and unless written approval is obtained from the undersigned, no action be taken on oral orders by any officials of the Department. If any officials acts in contravention of this Circular, severe action will be taken initiating disciplinary proceedings as per rules``.

ಯಾವಾಗ ಈ ಸರ್ಕ್ಯೂಲರ್ ಇಷ್ಯೂ ಆಗುತ್ತದೆ. ಇದರ ಹಿಂದೆ ಓರಲ್ ಸೂಚನೆ ಮೇರೆಗೆ ಕೆಲವು ಪರ್ಮಿಟಗೆ ತಾವು ಪರವಾನಗಿ ಕೊಟ್ಟಿದ್ದಾರೆ ಎಂಬುದು ಬಹಿರಂಗವಾಗುತ್ತದೆ. ಇಲ್ಲಿದಿದ್ದರೆ ಇಂತಹ ಸರ್ಕ್ಯೂಲರನ್ನು ಯಾವ ಇಲಾಖೆಯಲ್ಲಿ ಇಷ್ಯೂ ಮಾಡಿಲ್ಲ. ಮಂತ್ರಿಗಳ ಆರ್ಡರ್ ಒಬೆ ಮಾಡಬೇಡಿ ಅಥವಾ ನನ್ನ ಆರ್ಡರ್ಸನ್ನು ನೀವು ಒಬೆ ಮಾಡಬೇಡಿ ಎಂಬ ಪರಿಸ್ಥಿತಿ ಬರಬೇಕಾದರೆ ಕಾರಣವೇನು? ಅದಕ್ಕೆ ಕಾರಣವೇನು ಎಂದರೆ ಅಲ್ಲಿ ಯಾವಾಗಲೂ ಓರಲ್ ಸೂಚನೆ ಮೇರೆಗೆ ಕಾರ್ಯ ನಡೆಯುತ್ತಿತ್ತೋ ಹೇಗೆ? ಇವತ್ತೇನಾಗಿದೆ ತಾವು ಸಾವಿರಾರು ಪರ್ಮಿಟಗಳನ್ನು ಇಷ್ಯೂ ಮಾಡಿದಿರಿ. ಬೇಕಾದರೆ ನಾನು ಆ ಎಲ್ಲಾ ಪರ್ಮಿಟ್ ನಂಬರಗಳನ್ನು ಕೊಡುತ್ತೇನೆ. 1-4-95 ರಿಂದ 31-7-95ರ ಮೂರು ತಿಂಗಳ ಅವಧಿಯಲ್ಲಿ ಸುಮಾರು 443 ಪರ್ಮಿಟ್ ಕೊಟ್ಟಿದ್ದೀರಿ. ಅದರ ಜೊತೆಯಲ್ಲೇ ಆ ಪಿರಿಯಡನಲ್ಲೇ ಫೇಕ್ ಪರ್ಮಿಟ್ ಇಷ್ಯೂ ಆಗಿದ್ದು ಸುಮಾರು 108ರಿಂದ 165 ಇದರರ್ಥವೇನು? ಕೋಟ್ಯಂತರ ರೂ ಗ್ರಾನೈಟ್ ಲೂಟಿಯಾಗುತ್ತಿದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಡಲಿ, ನಮಗೆ ಇದರ ಸ್ಥಿತಿ ಗೊತ್ತಾಗಲಿ, ನೀವೊಂದು ಕ್ಲಿಯರ್ ಪಿಚ್ಚರ್ ಸದನಕ್ಕೆ ಕೊಟ್ಟರೆ ಯಾವ ಸಂದರ್ಭದಲ್ಲಿ ನೀವು ಈ ಸುತ್ತೋಲೆ ಇಷ್ಯೂ ಮಾಡಿದಿರಿ? ಎರಡನೆಯದು ಪತ್ರಿಕೆಗಳಲ್ಲಿ ಬಂದಿದೆ, ಮತ್ತು ನಿನ್ನೆಯಿಂದ ಆ ಸದನದಲ್ಲೂ ಚರ್ಚೆಯಾಗಿದೆ. ಅದನ್ನು ನಾನಿಲ್ಲಿ ಪುನಃ ಪ್ರಸ್ತಾಪ ಮಾಡುವುದಿಲ್ಲ. ಏನೆಂದರೆ ಸುಮಾರು 20 ಇಂಪರ್ಟಾಂಟ್ ಜನ ಇದರಲ್ಲಿ ಇನವಾಲ್ವ್ ಇದ್ದಾರೆಂಬುದನ್ನು ನಿಮ್ಮ ಸಚಿವರೇ ಪ್ರೆಸ್‌ಮೀಟ್‌ನಲ್ಲಿ ಹೇಳಿದ್ದಾರೆ. ಅವರು ಯಾರು? ಬೋಗಸ್ ಪರ್ಮಿಟ್ ಮೇಲೆ ಗ್ರಾನೈಟ್ ಸಾಗಿಸಿರುವ 20 ಜನರ ಹೆಸರುಗಳೇನು, ಎಷ್ಟು ಹಣ ಎಲ್ಲವನ್ನೂ ತಾವು ಬಹಿರಂಗಪಡಿಸಬೇಕು. ಆ ಮನೆಯಲ್ಲೂ ಇದರ ಪ್ರಸ್ತಾಪವಾಗಿ ಧರಣಿ ನಡೆಯುತ್ತಿದೆ. ಇದಕ್ಕೆ ಉತ್ತರವನ್ನು ಮುಖ್ಯಮಂತ್ರಿಗಳು ನಾಳೆ ಕೊಡುತ್ತೇವೆ ನಾಡಿದ್ದು ಕೊಡುತ್ತೇವೆಂದರೆ ಸಮಂಜಸವಾಗಲಾರದು. ಇದರ ಬಗ್ಗೆ ತಕ್ಷಣ ಒಂದು ಕಾಂಪ್ರಹೆನ್ಸೀವ್ ಹೇಳಿಕೆ ಮಾಡಿ ಸದನಕ್ಕೆ ತಿಳಿಸಬೇಕು, ಬೋಗಸ್ ಪರ್ಮಿಟ್ ಎಷ್ಟು ಇವರು ಕೊಟ್ಟಂತಹ ಪರ್ಮಿಟ್ ಎಷ್ಟು? 22 ನೇ ಜುಲೈನಲ್ಲಿ ಇಷ್ಯೂ ಆದ ಸರ್ಕ್ಯೂಲರ್ ಯಾವ ಸಂದರ್ಭದಲ್ಲಿ ಆಯಿತು, ಮತ್ತು ವಿಶೇಷವಾಗಿ ನನ್ನ ಓರಲ್ ಇನಸ್ಟ್ರಕ್ಷನ್ ಅನ್ನು ನೀವು ಒಬೆ ಮಾಡಬೇಡಿ, ರೈಟಿಂಗ್‌ನಲ್ಲಿ ಬಂದರೆ ಪರವಾಗಿಲ್ಲವೆಂದು

ಹೇಳಬಹುದಾಗಿತ್ತು. ಆದರೆ ಮಂತ್ರಿಗಳಿಂದಲೂ ಓರಲ್ ಇನಸ್ಟ್ರಕ್ಷನ್ ಬಂದರೂ ಮಾಡಬೇಡಿ ಎಂದು ಸೂಚನೆ ಕೊಡಬೇಕಾದರೆ ಮಂತ್ರಿಗಳು ಯಾವಾಗಲೂ ಓರಲ್ ಸೂಚನೆ ಕೊಡುವ ಧಾಟಿ ಇಟ್ಟುಕೊಂಡಿದ್ದರು ಎಂದಾಗುತ್ತದೆ ಮತ್ತು ಮೇಲಿನವರ ಇನಸ್ಟ್ರಕ್ಷನ್ ಆಧಾರದ ಮೇಲೆ ನೀವು ಕೆಲಸ ಮಾಡುತ್ತಿದ್ದರೇನೋ ಎಂಬ ಸಂಶಯವೂ ಬರುತ್ತದೆ. ಇಲ್ಲದಿದ್ದರೆ ಅವರು ಸಬಾರ್ಡಿನೇಟ್‌ಗೆ ಇನಸ್ಟ್ರಕ್ಷನ್ ಕೊಡುವುದು, ಮೇಲಿನವರ ಇನಸ್ಟ್ರಕ್ಷನ್ಸ್‌ನ್ನು ನೀವು ತೆಗೆದುಕೊಳ್ಳಬೇಡಿ ಎನ್ನುವುದು ಏನು ತೋರಿಸುತ್ತದೆ ಅಂದರೆ ಇದರಲ್ಲಿ ಗೋಲಮಾಲ್ ಇದೆ ಎಂದು ಇದರಲ್ಲಿ ಸಾಕಷ್ಟು ಅವ್ಯವಹಾರ ಆಗಿದೆ. ಕೋಟ್ಯಂತರ ರೂಪಾಯಿ ಲೂಟಿ ಆಗಿದೆ ಎಂಬುದು ಇದರಿಂದ ತೋರುತ್ತದೆ. ಇಲ್ಲದಿದ್ದರೆ ಅದು ಇವತ್ತು ಬಯಲಿಗೆ ಬರುತ್ತಿರಲಿಲ್ಲ. ಇಷ್ಟೊಂದು ಧೈರ್ಯವಾಗಿ ಯಾವ ಅಧಿಕಾರಿಯೂ ಡೈರೆಕ್ಷನ್ ಕೊಡುವುದಿಲ್ಲ. ಇವತ್ತು ಕೊಟ್ಟಿದ್ದಾರೆಂದರೆ ಇದರಲ್ಲಿ ಸತ್ಯಾಂಶ ಇದೆ. ಅದಕ್ಕಾಗಿ ನಾವು ಸ್ಟೇಟಮೆಂಟ್ ಮಾಡಬೇಕು, ಆಮೇಲೆ ಪುನಃ ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆ. ಹೆಚ್ಚಿನ ಡಿಟೇಲ್ಸ್ ಕೂಡ ನಾನು ಕೊಡುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಅಧ್ಯಕ್ಷರೇ, ಇವತ್ತು ಮೊದಲನೇ ಬಾರಿಗೆ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ಒಳ್ಳೆಯದನ್ನು ಹೇಳಿದಾಗಲಾದರೂ ಸ್ವಲ್ಪ ಕೇಳಿಸಿಕೊಳ್ಳಿ ಎಂದು ಏಕೆಂದರೆ ಮದನಗೋಪಾಲ್ ಎನ್ನುವಂಥ ಒಬ್ಬ ಪ್ರಾಮಾಣಿಕ ಅಧಿಕಾರಿ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಗೆ ಬಂದ ಮೇಲೆ ಮೂರು ತಿಂಗಳಲ್ಲಿ ಆ ಇಲಾಖೆಯಲ್ಲಿ ಹತ್ತಿರಹತ್ತಿರ 40 ಕೋಟಿ ರೂಪಾಯಿ ಆದಾಯ ಸರ್ಕಾರದ ಬೊಕ್ಕಸಕ್ಕೆ ತಂದಿದ್ದಾರೆ. ಕಳೆದ 8-10 ವರ್ಷಗಳಿಂದ ಗ್ರಾನೈಟ್ ಬಾಬ್ತು ಬಂದಿರುವ ಆದಾಯ ಎಂದೂ ಸಹ ಒಂದು ವರ್ಷದಲ್ಲಿ 35 ಕೋಟಿ ಧಾಟಿಲ್ಲ. ಮೂರೇ ತಿಂಗಳಲ್ಲಿ 40 ಕೋಟಿ ಧಾಟಿದೆ ಎನ್ನುವುದಾದರೆ ಈ ಅಧಿಕಾರಿ ಇಲ್ಲಿಗೆ ಬಂದ ಮೇಲೆ ಹಿಂದೆ ನಡೆಯುತ್ತಿದ್ದ ಅವ್ಯವಹಾರಗಳನ್ನು ತಡೆಯುವುದರಲ್ಲಿ ಯಶಸ್ವಿಯಾಗಿ ಬೊಕ್ಕಸಕ್ಕೆ ಹೆಚ್ಚು ಆದಾಯ ತರುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾನೆ ಎಂದು ಸದನದ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಆಗಲೇ ಹೇಳಿದ್ದಾರೆ. ಅದರ ಅಂಕಿಅಂಶಗಳನ್ನು ನಾನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಮೊದಲಿನಿಂದ ಈ ಅಧಿಕಾರಿ ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡುವಂತಹವರು ಎಂದು ನಂಬಿಕೆ ನನಗಿರುವುದರಿಂದ ಇದನ್ನು ಪ್ರಸ್ತಾಪಿಸುತ್ತಿದ್ದೇನೆ. ಅಧ್ಯಕ್ಷರೇ, ನಾನು ನೇರವಾಗಿ ನಿಮಗೆ ಹೇಳಬೇಕು ಅಂದರೆ ಸದನದ ಸಮಿತಿಯನ್ನು ಕಳುಹಿಸಿಕೊಟ್ಟರೆ ನಮಗೆ ಗೊತ್ತಾಗಬಹುದು, ಇವತ್ತು ಮದ್ರಾಸ್ ಬೀಚ್‌ನಲ್ಲಿ ಸುಮಾರು 50 ಗ್ರಾನೈಟ್ ಪೀಸ್ ಮತ್ತು ಮಂಗಳೂರು ಬಂದರಿನಲ್ಲಿ 150 ಪೀಸ್ ಒಟ್ಟು ಗ್ರಾನೈಟ್ಸ್‌ಗಳ ಬೆಲೆ 20 ಕೋಟಿಯಾಗುತ್ತದೆ, ಇದು ಕಾನೂನುಬಾಹಿರವಾಗಿ ಪೇಕಪರ್ಮಿಟ್‌ಗಳನ್ನು ಇಷ್ಯೂ ಮಾಡಿ ಆಗಿರುವಂಥದು ತಾವೇ ಹೇಳಿದರೆ ನಿಮಗೆ ಅರ್ಥವಾಗುತ್ತದೆ ಯಾವ ರೀತಿ ಅವ್ಯವಹಾರ ನಡೆಯುತ್ತಿತ್ತು ಎಂದು ತಾವು ಉತ್ತರ ಕೊಡುವಾಗ ಹೇಳಬಹುದು. ಕೋರ್ಟಿನಲ್ಲಿ ಸ್ಟೇ ಇದೆ ಎಂದು ಇವತ್ತು ಸರ್ಕಾರಿ ಭೂಮಿಯಲ್ಲಿರುವ ಅಥವಾ ಅರಣ್ಯದಲ್ಲಿರುವ ಗ್ರಾನೈಟ್ ತೆಗೆಯುವುದಕ್ಕೆ ಸ್ಟೇ ಇಲ್ಲ. ಈ ಕಂಟ್ರಾಕ್ಟರ್ಸ್ ಏನು ಮಾಡಿದ್ದಾರೆ, ತಮ್ಮ ಪ್ರೈವೇಟ್ ಲ್ಯಾಂಡನಲ್ಲಿ ಲೀಸ್ ಏನು ಮಾಡಿಕೊಂಡಿದ್ದಾರೆ ಅದನ್ನು ತೋರಿಸಿಕೊಂಡು

ಪಕ್ಕದಲ್ಲಿರುವ ಅರಣ್ಯ ಅಥವಾ ಸರ್ಕಾರಿ ಜಮೀನುಗಳಲ್ಲಿ ಲೂಟಿ ಮಾಡುತ್ತಿದ್ದಾದರೆ. ಸರ್ಕಾರದ ಖರಾಬ್ ಲ್ಯಾಂಡಿನಲ್ಲೂ ಗ್ರಾನೈಟ್ ಲೂಟಿ ಇವತ್ತು ನಿರಂತರವಾಗಿ ನಡೆಯುತ್ತಿದೆ. ಈ ಎಲ್ಲಾ ಹಿನ್ನಲೆಯಲ್ಲಿ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತೆ ಆ ಸರ್ಕ್ಯೂಲರ್ ಏನು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರಿಂದ ಹೋಗಿದೆ ದಕ್ಷಿಣ ವಲಯದ ಅಧಿಕಾರಿಗಳ ಒಂದು ಸಭೆಯಲ್ಲಿ, ಜೂನ್ ತಿಂಗಳಲ್ಲಿ ಚರ್ಚೆಯಾದಂಥ ವಿಷಯದ ಉಲ್ಲೇಖ ಮಾಡುತ್ತಾ ಇವರು ಡೈರೆಕ್ಷನ್ಸ್ ಕೊಟ್ಟಿದ್ದಾರೆ.

ಗಣಿ ಸಚಿವರ ಕಾರ್ಯಾಲಯದಿಂದ ಮತ್ತು ನಿರ್ದೇಶಕರ ಕಾರ್ಯಾಲಯದಿಂದ ಮೌಖಿಕ ಅಥವಾ ದೂರವಾಣಿಗಳ ಮೂಲಕ ಈ ತರಹದ ಆದೇಶ ಬಂದರೆ ಅದನ್ನು ಪರಿಪಾಲಿಸಬೇಡಿ ಎಂದು ನಿರ್ದೇಶನ ಕೊಡುವ ಧೈರ್ಯವನ್ನು ಒಬ್ಬ ಅಧಿಕಾರಿ ಮಾಡಿದ್ದಾರೆ ಅದನ್ನು ಅಪ್ರೀಷಿಯೇಟ್ ಮಾಡಬೇಕು ಅಭಿನಂದನೆ ಸಲ್ಲಿಸಬೇಕಾಗಿದೆ. ಅಂದರೆ ಅರ್ಥವೇನು? ನಾನು ಮಂತ್ರಿಗಳು ಮಾಡಿದ್ದಾರೆಂದು ಹೇಳಲು ಇಷ್ಟಪಡುವುದಿಲ್ಲ. ಅಂದರೆ ಪ್ರಭಾವ ಇರುವಂತಹ ಶಕ್ತಿ ಮಂತ್ರಿಗಳ ಅಧಿಕಾರಿಗಳ ಕಚೇರಿ ಮೂಲಕ ಗ್ರಾನೈಟ್ ಕಲ್ಲುಗಳನ್ನು ಕಾನೂನು ಬಾಹಿರವಾಗಿ ಸಾಗಾಣಿಕೆ ಮಾಡುವಾಗ ಹಿಡಿದಂತಹ ಕಾಲದಲ್ಲಿ ದೂರವಾಣಿ ಮೂಲಕ ಸೂಚನೆ ಕೊಟ್ಟು ಅದು ಮುಂದೆ ಮಂಗಳೂರು ಮದ್ರಾಸ್ ಹಾರ್ಬರಗಳಿಗೆ ಹೋಗಲು ಅವಕಾಶ ಮಾಡಿಕೊಡುವುದು ಕಳೆದ ಹತ್ತಾರು ವರ್ಷಗಳಿಂದ ನಿರಂತರವಾಗಿ ನಡೆಯುತ್ತಿದೆ ಎಂಬುದು ಇದೊಂದು ಉದಾಹರಣೆಯಿಂದ ಸಾಬೀತಾಗುತ್ತಿದೆ. ಅಂದರೆ ಜವಾಬ್ದಾರಿಯಿರುವ ಒಬ್ಬ ಸಚಿವರಿರುವಾಗ, ಒಂದು ವ್ಯವಸ್ಥೆ ಅಲ್ಲಿರುವಾಗ ಈ ರೀತಿ ಸೂಚನೆ ಒಬ್ಬ ಅಧಿಕಾರಿ ಕೊಟ್ಟಿದ್ದಾರೆ ಅಂದರೇ ಇಲ್ಲಿ ನಿರಂತರವಾಗಿ ಅವ್ಯವಹಾರಗಳು ನಡೆಯುತ್ತಿತ್ತು ಎನ್ನುವುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕಾಗಿಲ್ಲ. ಮತ್ತೆ ಫೇಕ್ ಪರ್ಮಿಟ್‌ಗಳನ್ನು ಕಂಡುಹಿಡಿಯಲು ಒರಿಜಿನಲ್ ಪರ್ಮಿಟ್‌ಗಳೊಡನೆ ಅವನ್ನು ಕಂಪೇರ್ ಮಾಡಿದಾಗ ನಿಮಗೆ ಗೊತ್ತಾಗುತ್ತದೆ. ಅಂದರೆ ನೀವು ಸತ್ಯವಾಗಿ ಪ್ರಾಮಾಣಿಕವಾಗಿ ಕೆಲಸವಾಗುತ್ತಿದೆ ಎಂಬ ಭ್ರಮೆಯಲ್ಲಿರುವಾಗಲೂ ಸಹ ನಿರಂತರವಾಗಿ ಕಾನೂನುಬಾಹಿರವಾಗಿ ಫೇಕ್‌ಪರ್ಮಿಟ್ ಇಷ್ಯೂ ಮಾಡಿಕೊಂಡು ಲೂಟಿ ದರೋಡೆ ನಡೆಯುತ್ತಿದೆ. ಇದನ್ನೆಲ್ಲಾ ನಿಯಂತ್ರಣ ಮಾಡುವುದಕ್ಕಾಗದಿದ್ದಾಗ ಸಚಿವರು ಜವಾಬ್ದಾರರು ಎಂದು ನಾನು ಹೇಳಲಿಲ್ಲ, ಇದನ್ನು ನಿಯಂತ್ರಿಸಲಿಲ್ಲ. ತಮ್ಮ ಸಚಿವಾಲಯದಿಂದ ದೂರವಾಣಿ ಮೂಲಕ ಈ ವ್ಯವಹಾರಗಳು ನಡೆಯುತ್ತಿವೆ. ಈ ರೀತಿ ಅಧಿಕಾರಿ ಸೂಚನೆ ಕೊಡುವ ಮಟ್ಟಕ್ಕೆ ಬಂದ ಮೇಲೆ ಆ ರೀತಿಯ ಸಚಿವರು ಯಾವುದೇ ಕಾರಣಕ್ಕೆ ಅಧಿಕಾರದಲ್ಲಿ ಮುಂದುವರಿಯಲು ಅವರಿಗೆ ನೈತಿಕ ಹಕ್ಕಿಲ್ಲ. ಅವರನ್ನು ಕೈಬಿಡಬೇಕಾಗುತ್ತದೆ, ನೀವು ಉತ್ತರ ಕೊಟ್ಟಮೇಲೆ ನಾನು ಇನ್ನೂ ದಾಖಲೆಗಳನ್ನು ಕೊಡುತ್ತೇನೆ. ಈಗ ಅವರನ್ನು ಕೈಬಿಡಬೇಕು, ಮತ್ತು ಈಗ ಇದರ ಹಿಂದೆ ಒಂದು ಸಂಚಿದೆ ಎಂಬ ಭಯವಿದೆ ಅದೆಂದರೆ ಈ ನೆಪ ಮಾಡಿಕೊಂಡು ಈ ರೀತಿಯ ಸರ್ಕ್ಯೂಲರ್ ಇಷ್ಯೂ ಮಾಡಿದರು ಎಂದು ಮದನಗೋಪಾಲ್ ಅವರನ್ನೇ ಎತ್ತಂಗಡಿ ಮಾಡುವ ಕುತಂತ್ರ ಇದೆ ಎಂಬುದು ನನ್ನ ಕಿವಿಗೆ ಬಿದ್ದಿದೆ. ಏಕೆಂದರೆ ಗುಲ್ಬರ್ಗಾದಿಂದ ಯಾವುದೋ ಕಾರಣಕ್ಕೆ ಇಲ್ಲಿಗೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಈ ಇಲಾಖೆಯಲ್ಲಿ ಬಿಗಿ ಮಾಡುವುದಕ್ಕಾಗಿ ನಾನು ತಂದಿದ್ದೇನೆ ಎಂದು. ನನಗೆ

ಬಂದಿರುವುದು ಅಲ್ಲವೆಂದಾದರೆ ನಾನು ಆನಂದಪಡುತ್ತೇನೆ. ಈಗಾಗಲೇ ಬೇರೆ ಕಡೆಗೆ ಅವರನ್ನು ಜಿಲ್ಲಾಧಿಕಾರಿಗಳನ್ನಾಗಿ ವರ್ಗಾವಣೆ ಮಾಡುವುದಕ್ಕಾಗಿ ಎಲ್ಲಾ ರೀತಿಯ ಷಡ್ಯಂತರ, ಪ್ರಭಾವಬೀರುವ ಶಕ್ತಿ ಕೆಲಸಮಾಡುತ್ತಿದೆ ಎಂದು ಖಾತರಿಯಾಗಿ ನನಗೆ ತಿಳಿದುಬಂದಿದೆ. ಯಾವುದೇ ಕಾರಣಕ್ಕೆ ಈ ಪ್ರಾಮಾಣಿಕ ಅಧಿಕಾರಿಯನ್ನು ಆ ಕಡೆ ಈ ಕಡೆ ಸರಿಸದೆ ಅವರೇನು ಒಂದು ಆದೇಶ ಕೊಟ್ಟಿದ್ದಾರೆ ಇದಕ್ಕೆ ಆಧಾರಗಳಿರುವುದರಿಂದ ಸರಿಯಾದ ಸಕಾರಣಗಳಿರುವುದರಿಂದ ಆ ಅಧಿಕಾರಿಯನ್ನು ಬಲಿಪಶು ಮಾಡದೆ ಈ ಅವ್ಯವಹಾರಗಳು ನಡೆಯಲು ಕಾರಣಕರ್ತರಾಗಿರುವ ಅವರಿಗೆ ಗೊತ್ತಿದ್ದು ಅಥವಾ ಗೊತ್ತಿಲ್ಲದೆಯೋ ಅಥವಾ ಗೊತ್ತಿದ್ದರೂ ಅವ್ಯವಹಾರ ನಡೆಯುವಾಗ ಕಣ್ಣು ಮುಚ್ಚಿ ಕುಳಿತುಕೊಳ್ಳುವಂತಹ ಒಬ್ಬ ಸಚಿವರು ಅಲ್ಲಿದ್ದಾಗ ಈ ಇಲಾಖೆಯನ್ನು ಸರಿಯಾಗಿ ನಡೆಸಲು ಸಾಧ್ಯವಿಲ್ಲ. ಅದಕ್ಕಾಗಿ ಈ ಫೇಕ್ ಪರ್ಮಿಟ್‌ಗಳನ್ನು ಇಷ್ಯೂ ಮಾಡಿರುವುದರ ಬಗ್ಗೆ ತನಿಖೆ ಮಾಡಬೇಕು, ಯಾವ ತನಿಖೆಯೋ, ಸಿಬಿಐ, ಸಿಬಿಡಿ ನಾನು ಒತ್ತಾಯ ಮಾಡುವುದು, ಈ ಸದನದ ಸಮಿತಿ ಮಾಡಿ ಆಗ ನಾವು ಪೂರ್ಣ ದಾಖಲೆಗಳನ್ನು ಕೊಡಲು ನಾವು ಸಿದ್ಧರಿದ್ದೇವೆ. ತಕ್ಷಣ ಒಂದು ಜಂಟಿ ಸದನದ ಸಮಿತಿ ಮಾಡಬೇಕು, ಆ ಘೋಷಣೆ ಮಾಡಿ, ವಾಸ್ತವ ಸಂಗತಿಗಳನ್ನು ನಮ್ಮ ಮುಂದೆ ಇಡದೇ ಇದ್ದರೆ ಅನಿವಾರ್ಯವಾಗಿ ನಾವು ಧರಣಿ ಕುಳಿತುಕೊಡು ಸತ್ಯಾಗ್ರಹ ಮಾಡಬೇಕೋ ಬೇಡವೋ ಎಂಬ ತೀರ್ಮಾನ ತೆಗೆದುಕೊಳ್ಳುತ್ತೇವೆ. ಸದ್ಯಕ್ಕೆ ಅವರ ಉತ್ತರವನ್ನು ಮಾತ್ರ ನಾನು ನಿರೀಕ್ಷೆ ಮಾಡುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಅಧ್ಯಕ್ಷರೇ, ಈ ಗ್ರಾನೈಟ್ ಎನ್ನುವುದು ಒಂದು ಕರ್ಮಕಾಂಡ. ಇದೇನು ಒಂದು ನಿಮಿಷದಲ್ಲಿ ಮುಗಿಯುವಂತಹ ವಿಚಾರವಲ್ಲ. ಮದನಗೋಪಾಲ್ ಬಂದರು 40 ಕೋಟಿ ಉಳಿಸಿದರು ಅದರ ಬಗ್ಗೆ ನನ್ನದು ತಕರಾರಿಲ್ಲ. ಅವರು ಬಂದ ಮೇಲೆ 40 ಕೋಟಿ ಉಳಿಸಿದರು ಎಂದು ಬೆನ್ನು ತಟ್ಟಿಕೊಳ್ಳಬೇಕಾಗಿಲ್ಲ. ನಾನು ಹೇಳುತ್ತೇನೆ. ನೂರು ಇನ್ನೂರು ಕೋಟಿ ಉಳಿಸಬಹುದು, ನೀವು ಪ್ರಮಾಣಿಕವಾಗಿ ಗ್ರಾನೈಟ್‌ನ್ನು ಮಾರಲೇಬೇಕೆಂದರೆ 200-300 ಕೋಟಿ, ಭುಜ ಏಕೆ ತಟ್ಟಿಕೊಳ್ಳುತ್ತೀರಿ, ಅದಕ್ಕೊಂದು ಇಲಾಖೆಯೂ ಬೇಕಾಗಿಲ್ಲ. ಇದು ನಿಸರ್ಗಸಂಪತ್ತಿನ ನಾಶ ಮತ್ತು ಲೂಟಿ ಎಷ್ಟರಮಟ್ಟಿಗೆ ನಡೆದಿದೆ ಎಂಬುದು ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಇದರ ಚಿತ್ರವಿಲ್ಲ, ಸರ್ಕಾರದಲ್ಲೂ ಇದರ ಚಿತ್ರವಿಲ್ಲ. ಕರ್ನಾಟಕಾದ್ಯಂತ ಇದುವರೆಗೆ ಎಷ್ಟು ಗ್ರಾನೈಟ್ ಹೋಗಿದೆ ಎಂಬ ಲೆಕ್ಕವಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಅಧ್ಯಕ್ಷರೇ, ಈ ಚರ್ಚೆಗೆ ನನ್ನ ಅಬ್ಜೆಕ್ಷನ್ ಇಲ್ಲ, ನಾನೇ ವೆಲಕಂ ಮಾಡುತ್ತೇನೆ ಈ ವಿಷಯದಲ್ಲಿ ಚರ್ಚೆಗೆ ಪ್ರತ್ಯೇಕವಾಗಿ ಕಾಲ ನಿಗಧಿ ಮಾಡಿದರೆ ಕಾಂಪ್ರಹೆನ್ಸಿವ್ ಆಗಿ ಉತ್ತರ ಕೊಡಲು ನಾನು ಸಿದ್ಧನಾಗಿ ಬರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಾವು ಕೇಳಿರುವುದಕ್ಕೆ ಒಂದು ಸ್ಟೇಟಮೆಂಟ್ ಮಾಡಿಬಿಡಿ.

ಶ್ರೀ ಹೆಚ್.ಡಿ. ದೇವೇಗೌಡ : ತಾವೂ ಮಂತ್ರಿಗಳಾಗಿಯೂ ಕೆಲಸ ಮಾಡಿದ್ದೀರಿ. ಈಗ ವಾಟಾಳ್ ನಾಗರಾಜರವರು ಬೇಕಾದಷ್ಟು ವಿಷಯಗಳಿವೆ ಎಂದಿದ್ದಾರೆ ನಾನು ವೆಲಕಂ ಮಾಡುತ್ತೇನೆ.

ಯಡಿಯೂರಪ್ಪನವರ ಹತ್ತಿರ ಬೇಕಾದಷ್ಟು ದಾಖಲಾತಿ ಇವೆ ಎಂದಿದ್ದಾರೆ. ನಾನು ವೆಲಕಂ ಮಾಡುತ್ತೇನೆ. ಅದಕ್ಕಾಗಿ ನಾನು ವಿನಂತಿ ಮಾಡುತ್ತೇನೆ. ಒಂದು ವಿಶೇಷವಾದ ಚರ್ಚೆಗೆ ಅವಕಾಶ ಮಾಡಿಕೊಡಿ, ಸಾಕಷ್ಟು ದೀರ್ಘ ಚರ್ಚೆಯಾಗಲಿ, ಇದರ ಬಗ್ಗೆ ಸರ್ಕಾರ ತಾವು ಕೊಡುವ ಎಲ್ಲಾ ದಾಖಲೆಗಳು ಸಲಹೆಗಳು ಸ್ವೀಕಾರ ಮಾಡಿ ಸುದೀರ್ಘವಾಗಿ ಉತ್ತರ ಕೊಡಲು ನಾನು ತಯಾರಾಗಿದ್ದೇನೆ. ದಯಮಾಡಿ ಅದಕ್ಕೆ ಅವಕಾಶ ಮಾಡಿಕೊಡಿ ಎಂದು ಅಧ್ಯಕ್ಷರಲ್ಲಿ ನಾನು ವಿನಂತಿ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನ ಮನವಿ ಏನೆಂದರೆ ಈ ಸರ್ಕ್ಯೂಲರ್ ಬಗ್ಗೆ ನಮ್ಮ ದಾಖಲೆ ಮೇಲೆ ಅವರು ಸ್ಟೇಟ್‌ಮೆಂಟ್ ಮಾಡಲಿ, ಅಮೇಲೆ ನಮಗೆ ಸಮಾಧಾನವಾದರೆ ಅಲ್ಲಿಗೆ ಕೇಸ್ ಮುಕ್ತಾಯವಾಗಲಿ, ಸಮಾಧಾನ ಆಗಲಿಲ್ಲವೆಂದರೆ ನೀವು ಬೇಕಾದರೆ ಉತ್ತರ ಕೊಡಿ.

ಶ್ರೀ ಹೆಚ್.ಡಿ. ದೇವೇಗೌಡ : ಖರ್ಗೆಯವರೇ, ಮಾನ್ಯ ವಿರೋಧಪಕ್ಷದ ನಾಯಕರು ಸದನದಲ್ಲಿ ನಾವು ಧರಣಿ ಕೂರಬೇಕಾದುತ್ತದೆ, ಸದನದ ಸಮಿತಿ ಮಾಡಿ ಎಂದು ಹೇಳಿದ್ದಾರೆ. ಶ್ರೀ ವಾಟಾಳ್ ನಾಗರಾಜ್‌ರವರು ಹತ್ತಿರ ಬೇಕಾದಷ್ಟು ವಿಚಾರಗಳಿವೆ, 200 ಕೋಟಿ ಮಾಡಬಹುದು, ಸಲಹೆ ಕೊಡಬಹುದು- ಇದು ಪ್ರಾಮುಖವಾದ ವಿಷಯ. ಸುಮ್ಮನೆ ಒಂದು ಸ್ಟೇಟಮೆಂಟಿನಿಂದ ಆಗುವುದಿಲ್ಲ. ಅವರು ಧರಣಿ ಕೂರುವುದು ಬಿಡುವುದು ಅಂತಿಮವಾಗಿ ವಿರೋಧಪಕ್ಷದವರಿಗೆ ಬಿಟ್ಟಿದ್ದುದು. ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಅವಕಾಶವಾದರೆ ಸಂಪೂರ್ಣ ಚರ್ಚೆ ಮಾಡಿ ನನ್ನ ರಿಪ್ಲೈ ಆದಮೇಲೆ ನಿಮಗೆ ಸಮಾಧಾನವಾದರೆ ಸರಿ, ಇಲ್ಲಾಂದರೆ ಏನು ಬೇಕೆಂದರೂ ತೀರ್ಮಾನ ಮಾಡಬಹುದು, ಅದಕ್ಕೇ ನಾನೇ ಅಧ್ಯಕ್ಷರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. let there be a debate on this issue. I have no objection and Iam prepared to hear the opposition.

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೇ, ಖರ್ಗೆಯವರು ಕೆಲವು ನಿರ್ದಿಷ್ಟವಾದ ಘಟನೆಯನ್ನು ಈ ಸದನದ ಗಮನಕ್ಕೆ ತಂದಿದ್ದಾರೆ. ಒಂದು ಕಳ್ಳ ಪರ್ಮಿಟಗಳನ್ನು ನೀಡಿರುವುದು, ಡೈರೆಕ್ಷನ್, ಗಣಿ ಭೂವಿಜ್ಞಾನ ಇಲಾಖೆಯವರು ಒಂದು ಸರ್ಕ್ಯೂಲರ್ ಇಷ್ಯೂ ಮಾಡಿದ್ದಾರೆ. ಆ ಸಂದರ್ಭದಲ್ಲಿ the Director of Mines and Geology has issued a Circular - ``Oral instructions from the Minsister's office and also from the Directorate``.

MR. SPEAKER : From Higher-ups. Has it been mentioned there as Minister?

SRI. M. MALLIKARJUN KHARGE : Yes. It says, `` Oral orders are issued from the office of the Directorate and also from the office of the Minister for Mines and Geology".

ಶ್ರೀ ಕಾಗೋಡು ತಿಮ್ಮಪ್ಪ : ಸ್ಪೆಸಿಫಿಕ್ ಆಗಿ ಇದೆ. ಈ ಸರ್ಕ್ಯೂಲರ್ ಇಷ್ಯೂ ಮಾಡಿರಬೇಕಾದರೆ ಅವರ ಗಮನಕ್ಕೆ ಕೆಲವು ಘಟನೆಗಳು ಬಂದಿದೆ ಎನ್ನುವುದನ್ನು ಅವರು ಹೇಳಿದ್ದಾರೆ. Specific instances have taken place here. ಅದಕ್ಕೆ ಇದರ ಆಧಾರದ ಮೇಲೆ ಸರ್ಕ್ಯೂಲರ್ ಇಷ್ಯೂ ಮಾಡಿದ್ದಕ್ಕೆ ಕಾರಣವೇನು? ಜೊತೆಗೆ ಅವರು ಪರ್ಮಿಟ್ ಕೊಟ್ಟಿದ್ದನ್ನು ಹೇಳಿದ್ದಾರೆ. ಇದರ ಬಗ್ಗೆ ಈ ಅಂಶಗಳು ಸರಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಅವರೇನು ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆಂದು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಖರ್ಗೆಯವರು ಹಾಗೂ ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಪ್ರಾಮುಖ್ಯವಾದ ವಿಚಾರವನ್ನು ಇಲ್ಲಿ ಎತ್ತಿದ್ದಾರೆ. ಅದಕ್ಕೆ ಈಗಲೇ ಉತ್ತರ ಬೇಕೆನ್ನುವುದು ಅವರ ವಾದ. ನಾನು ಸಮಗ್ರವಾಗಿ ಇದರ ಬಗ್ಗೆ ಚರ್ಚೆಯಾಗಬೇಕೆಂದು ಹೇಳುತ್ತಿದ್ದೇನೆ. ಇದು ನನ್ನ ವಾದ.

ಶ್ರೀ ಎಂ. ವೀರಪ್ಪ ಮೊಯಿಲಿ : ಸಮಗ್ರವಾದ ಚರ್ಚೆ ಅಂದರೆ ಏನು? ಕೆಲವು ಫೇಕ್ ಪರ್ಮಿಟಗಳನ್ನು ಇಷ್ಯೂ ಮಾಡಿದ್ದಾರೆ, ಕೆಲವು ಮಿನಿಸ್ಟರ್ಸ ಆದೇಶದ ಪ್ರಕಾರ ಕೆಲವು ಫೇಕ್ ಪರ್ಮಿಟಗಳನ್ನು ಇಷ್ಯೂ ಮಾಡಿದೆ ಎಂಬ ಅರ್ಥ ಬರುತ್ತದೆ ಡೈರೆಕ್ಟರಲ್ಲಿ ಆಗ ಸಮಗ್ರವಾಗಿ ಇನ್ಕೊಮ್ಮೆ ಮಾಡಿ. ಈಗ ಇದರ ಬಗ್ಗೆ ಕೂಡಲೇ ಚರ್ಚೆಯಾಗಬೇಕು. ಮುಂದೆ ಬೇರೆ ಬೇರೆ ಅಧಿಕಾರಿಗಳಿಗೂ ಓರಲ್ ಇನ್ಸ್ಪೆಕ್ಷನ್ಸ್ ಕೊಟ್ಟಿರಬಹುದು. ನಿಮಿಷ ನಿಮಿಷ ಹೋದ ಹಾಗೆ the evidence may be suppressed in some of karters

ಶ್ರೀ ಹೆಚ್.ಡಿ. ದೇವೇಗೌಡ : ಅದಕ್ಕೆ ನಾನು ಸಿದ್ದನಿದ್ದೇನೆ. ಒಂದು ಅರ್ಧ ಗಂಟೆಯೊಳಗೆ ಕಚೇರಿಗಳಿಗೆ ಕಳುಹಿಸುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸಮಗ್ರವೆನ್ನುವುದನ್ನು ಈಗಲೇ ಬಿಟ್ಟೆ. ಸಮಗ್ರ ಚರ್ಚೆ ಅಂದರೆ ಮುಂದಿನ ತಿಂಗಳು ಎಂದು ಅರ್ಥ ಇರಬಹುದು.

ಶ್ರೀ ಕಾಗೋಡು ತಿಮ್ಮಪ್ಪ : ಇಡೀ ಕರ್ನಾಟಕ ಭೌಗೋಳಿಕ. ಈಗ ಇರುವುದು ಇಲ್ಲಿ ನಡೆದಿದ್ದು.

ಶ್ರೀ ವಾಟಾಳ್ ನಾಗರಾಜ್ : ಈ ಪ್ರಕರಣಕ್ಕೆ ಸೀಮಿತವಾಗೋಣ. ಮಾನ್ಯ ಮೊಯಿಲಿಯವರು ಹಾಗೂ ಮಾನ್ಯ ಕಾಗೋಡು ತಿಮ್ಮಪ್ಪನವರ ಮಾತನ್ನು ನಾವು ಮನ್ನಿಸಿದ್ದೇವೆ. ಈ ಪ್ರಕರಣಕ್ಕೆ ಮಂತ್ರಿಗಳ ಕಾರ್ಯಾಲಯದಿಂದ ಆದೇಶ ಹೊರಟಿತ್ತೇ ಬಿಟ್ಟಿತ್ತೇ ಎನ್ನುವುದಕ್ಕೆ ಸೀಮಿತ ಮಾಡೋಣ. ಈಗಲೇ ಚರ್ಚೆಗೆ ತೆಗೆದುಕೊಳ್ಳೋಣ. ತಾವು ಒಪ್ಪುವುದಾದರೆ ನನ್ನದು ಏನೂ ಅಭ್ಯಂತರ ವಿಲ್ಲ. ಇವರು ಎತ್ತಿರ ತಕ್ಕಂತಹ ಪ್ರಶ್ನೆ ಏನು ಇದೆ ಇದು ಅತ್ಯಂತ ಪ್ರಾಮುಖ್ಯವಾದ ಪ್ರಶ್ನೆ. ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬಹುದು. ನನ್ನ ಒಟ್ಟಾರೆ ಅಭಿಪ್ರಾಯದಲ್ಲಿ ನಾನೇನು ಹೇಳುತ್ತಿದ್ದೇನೆಂದರೆ ಅವರ ಚರ್ಚೆಗೆ ನಾನೇನೂ ಅಡ್ಡಿ ಬರುವುದಿಲ್ಲ. ನೀವು ಎತ್ತಿದಂತಹ ಪ್ರಶ್ನೆಗೆ ನಾನು ವಿರೋಧ ಮಾಡುವುದಿಲ್ಲ. ನಾನು ಬೆಂಬಲ ಕೊಡುತ್ತಿದ್ದೇನೆ. ಹತ್ತಾರು

ವರ್ಷಗಳಿಂದ ನಾನು ಮತ್ತು ರೈತ ಸಂಘದವರು ಸಮಗ್ರವಾಗಿ ಇದು ನಿಲ್ಲಬೇಕು ನಿಸರ್ಗ ಸಂಪತ್ತು ನಾಶವಾಗುತ್ತಿದೆ. ಕಲ್ಲು ತೆಗೆಯುವುದನ್ನು ನಿಲ್ಲಿಸಬೇಕೆಂದು ಎಲ್ಲಾ ಸರಕಾರಕ್ಕೂ ಹೇಳುತ್ತಿದ್ದೇವೆ. ಮಾನ್ಯ ಮೊಯಿಲಿಯವರ ಸರಕಾರಕ್ಕೆ ಹೇಳಿದ್ದಾಯಿತು. ಮಾನ್ಯ ಬಂಗಾರಪ್ಪನವರ ಸರಕಾರಕ್ಕೆ ಹೇಳಿದ್ದಾಯಿತು. ಮಾನ್ಯ ದೇವೇಗೌಡರವರಿಗೂ ಅದನ್ನೇ ಹೇಳುತ್ತಿದ್ದೇವೆ. ಯಾವುದೋ ಸಣ್ಣ ವಿಚಾರದಲ್ಲಿ ಮಾತನಾಡುತ್ತಿಲ್ಲ. ಸಮಗ್ರವಾಗಿ ಸಂಪೂರ್ಣವಾಗಿ ಇದರ ಬಗ್ಗೆ ನನ್ನದು ಖಾಸಗಿ ನಿರ್ಣಯ 5 ವರ್ಷಗಳ ಕಾಲ ಇಲ್ಲಿ ನಡೆಯಿತು. ಖಾಸಗೀ ನಿರ್ಣಯದ ಬಗ್ಗೆ ಸಮಗ್ರವಾದ ಚರ್ಚೆಯಾಯಿತು. ಇದರ ಬಗ್ಗೆ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಒಂದು ಸಮಿತಿಯನ್ನು ಮಾಡಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇಷ್ಯೂ ಡೈವರ್ಟ್ ಮಾಡುವುದು ಬೇಡ. I am specifically making this change A Circular is issued because a lot of interference from the Minister other wise, he would not have issued this Circular. I want a clear statement from the Chief Minister or the concerned Minister regarding Fake Permit, circular, and about the names of the 20 persons who are involved in this, their assets, and what are the total cost involved in that-this much I am asking . If the Chief Minister gives me this statement I am very much thankful to him.

ಶ್ರೀ ವಾಟಾಳ್ ನಾಗರಾಜ್ : ಒತ್ತಾಯ ಮಾಡುತ್ತಿದ್ದೀರಿ. ತಾವು ಆ ದಾರಿ ಬಿಟ್ಟು ನಾನು ಬೇರೆ ಕಡೆ ಹೋಗುತ್ತಿಲ್ಲ, ಸ್ವಲ್ಪ ಮುಂದೆ ಹೋಗುತ್ತಿದ್ದೇನೆ.

Sri. M. Veerappa Moily : This is a very serious matter. ಫೇಕ್ ಪರ್ಮಿಟ್ ಇಷ್ಯೂ ಆಗಿದೆ. ಡೈರೆಕ್ಟರ್ ಪರಿಸ್ಥಿತಿಯನ್ನು ಮನಗಂಡು ಇಂತಹ ಒಂದು Unprecedented type of circular has issued. Either the officer is wrong or the Minister is wrong.

ತಾವೇನು ಮಾಡುತ್ತಿದ್ದೀರಿ, ಸಮಗ್ರ ಪಾಲಿಸಿ ಬಗ್ಗೆ 5 ವರ್ಷ ಚರ್ಚೆ ಮಾಡಿದ್ದೇವೆ ಇನ್ನು 5 ವರ್ಷ ಚರ್ಚೆ ಮಾಡುತ್ತೇವೆಂಬ ಭಾವನೆ ಇದ್ದರೆ ಮಾಡಿ. ನಾವು ಇದಕ್ಕೆ ಅಡ್ಡಿ ಬರುವುದಿಲ್ಲ. ಆದರೆ ಈಗ ಬೇಕಾಗಿರತಕ್ಕಂಥಾದ್ದು ಪ್ರಸ್ತುತವಾಗಿ ಬೇಕಾಗಿರತಕ್ಕಂಥಾದ್ದು.

ಶ್ರೀ ವಾಟಾಳ್ ನಾಗರಾಜ್ : ನನ್ನ ಭಾವನೆಯನ್ನು ಅವರು ಈಗಲೇ ಹೇಳಿದರು. ಮಾನ್ಯ ಮೊಯಿಲಿಯವರ ತಲೆಯಲ್ಲಿ ಅದು ಇದೆ. ಗೊತ್ತಿಲ್ಲದೆ ಏಕೆ ಮಾತನಾಡುತ್ತೀರಿ? ನನ್ನ ಭಾವನೆ ಏನು ಹೇಳಿದ್ದೇನೆ ನಾನು. ನಾನು ಅದರ ಬಗ್ಗೆಯೇ ಮಾತನಾಡುತ್ತೇನೆ. ನಾನು ತಮ್ಮಲ್ಲಿ ಕಳಕಳಿಯ ಮನವಿ ಮಾಡುತ್ತೇನೆ. ಈಗ ಅವರೇನು ಪ್ರಸ್ತಾಪಿಸಿದ್ದಾರೆ ಅದಕ್ಕೆ ನನ್ನದೇನೂ ವಿರೋಧ ಇಲ್ಲ ಸಂಪೂರ್ಣವಾದ ಬೆಂಬಲ ಇದೆ. ಮಂತ್ರಿಗಳ ಕಚೇರಿಯಿಂದ ಆದೇಶ ನೀಡಿದಂತಹವರು ಯಾರು ಮಂತ್ರಿಗಳು ಯಾರು ಏನ್ನುವುದುರ ಬಗ್ಗೆ ಕಚೇರಿಯಿಂದ ಆದೇಶ ನೀಡಿದಂತಹವರು ಯಾರು ಮಂತ್ರಿಗಳು ಯಾರು

ಎನ್ನುವುದರ ಬಗ್ಗೆ ತಕ್ಷಣದಿಂದಲೇ ಯಾವ ನಿಮಿಷವನ್ನು ತಡಮಾಡದೆ ಮುಖ್ಯಮಂತ್ರಿಗಳು ಹೇಳಿಕೆ ಕೊಡಬೇಕು. ನಾನು ಮುಂದಕ್ಕೆ ಹೋಗುತ್ತಿದ್ದೇನೆ. ಇವತ್ತು ಪತ್ರಿಕೆಯಲ್ಲಿ ಬಂದಿದೆ. ಅರಣ್ಯ ಇಲಾಖೆಯ ಅಧಿಕಾರಿ ಸುಳ್ಳು ಸರ್ಟಿಫಿಕೇಟಗಳನ್ನು ಕೊಟ್ಟು ಕಲ್ಲನ್ನು ಸಾಗಿಸುತ್ತಿದ್ದ ಅವರನ್ನು ದಸ್ತಗಿರಿ ಮಾಡಿದ್ದಾರೆ. ಕೆಲವು ಅಧಿಕಾರಿಗಳನ್ನು ಬಂಧಿಸಿದ್ದಾರೆನ್ನುವುದು ತಿಳಿದು ಬಂದಿದೆ. ಯಾವ ಅಧಿಕಾರಿಯನ್ನು ದಸ್ತಗಿರಿ ಮಾಡಿದ್ದಾರೆ ಯಾವ ಸಂದರ್ಭದಲ್ಲಿ ಮಾಡಿದ್ದಾರೆ ಎಷ್ಟು ಕಲ್ಲುಗಳನ್ನು ಸಾಗಿಸುತ್ತಿದ್ದರು. ಸಾಗಿಸುವುದಕ್ಕೆ ಅವರು ಕೊಟ್ಟಂತಹ ಪರವಾನಗಿಗಳು ಏನು ಎಂಬ ಬಗ್ಗೆ ಸಮಗ್ರವಾಗಿ ಹೇಳಿಕೆಯನ್ನು ಈಗಲೇ ಸರಕಾರ ಕೊಡಬೇಕು. ಈ ಹೇಳಿಕೆಯಿಂದಲೇ ನಾವು ತೃಪ್ತರಾಗುತ್ತೇವೆಂಬ ಪ್ರಶ್ನೆ ಅಲ್ಲ. ಮಾನ್ಯ ಮೊಯಿಲಿಯವರೇನೋ ಮುಂದಿನ ವರ್ಷಕ್ಕೆ ಪ್ರಶ್ನೆಯನ್ನು ವಾಟಾಳ್ ನಾಗರಾಜರವರು ಕೇಳುತ್ತಿದ್ದಾರೆಂಬ ಭಾವನೆ ಇಟ್ಟುಕೊಂಡಿದ್ದಾರೆ. ಈಗ ಅವರಿಗೆ ಅರ್ಥವಾಗಿರಬೇಕು ಇಲ್ಲಿಯವರೆಗೆ ಅರ್ಥವಾಗಿರಲಿಲ್ಲ. ನಾನು ತಿಳಿಗನ್ನಡದಲ್ಲಿ ಹೇಳುತ್ತಿದ್ದೇನೆ. ಅದಲ್ಲ ಇದಲ್ಲ ಎಂದರೆ ನಾನೇನು ಮಾಡಲಿ. ಗ್ರಾನೈಟ್ ಲೂಟಿ ಬಗ್ಗೆ ಚರ್ಚೆ ಮಾಡಬೇಕು. ಈಗಲೇ ಚರ್ಚೆಗೆ ತೆಗೆದುಕೊಳ್ಳಬೇಕು ನನ್ನದೇನೂ ಅಭ್ಯಂತರವಿಲ್ಲ. ಸಮಗ್ರವಾಗಿ ಚರ್ಚೆ ಮಾಡಲು ತಾವು ಇನ್ನೊಂದು ದಿವಸ ಅವಕಾಶ ಕೊಡುತ್ತೀರೆಂದು ಕಾಣುತ್ತದೆ. ಈ ಎರಡು ವಿಚಾರದಲ್ಲಿ ಈ ಕ್ಷಣದಲ್ಲೇ ನನ್ನ ಮಾತು ಮುಗಿಸಿ ಕುಳಿತ ತಕ್ಷಣ ಕ್ರಮ ತೆಗೆದುಕೊಳ್ಳಬೇಕು.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸರ್ಕ್ಯೂಲರ್ ಅನ್ನು ಮಾನ್ಯ ಖರ್ಗೆಯವರು ತಮ್ಮ ಮುಂದಿಟ್ಟಿದ್ದಾರೆ. ಇದೊಂದು ಅಂಶ. ಇನ್ನೊಂದು ಅಂಶ ಇದರಲ್ಲಿ ಇದೆ. ಕಳ್ಳ ಪರ್ಮಿಟಗಳು ಮತ್ತು ಪರ್ಮಿಟಗಳದ್ದು ನಕಲಿ 3 ವಿಧಾನದಲ್ಲಿ ನಡೆಯುತ್ತಿವೆ. ಒಂದು ಮೈನ್ಸ ಅಂಡ್ ಜಿಯಾಲಜಿಯವರು ಕೊಡತಕ್ಕಂತಹ ಪರ್ಮಿಟಗಳು ಅದರ ಜೊತೆಗೆ ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಕೊಡತಕ್ಕಂತಹ ಪರ್ಮಿಟಗಳು, ಇದರ ಜೊತೆಯಲ್ಲಿ ಅರಣ್ಯ ಇಲಾಖೆಯವರು ಕೊಡತಕ್ಕಂತಹ ಪರ್ಮಿಟಗಳು ಒಂದು. ಈ ಮೂರು ಪರ್ಮಿಟಗಳ ಜೊತೆಗೆ ಮೇಲುಗಡೆಯಿಂದ ಖರ್ಗೆಯವರು ಸರ್ಕ್ಯುಲರ್ ಹೇಳಿದರಲ್ಲಾ. ಮೇಲುಗಡೆಯಿಂದ ಆಸ್ ಆಥರೈಸ್ಡ ಆಗಿ ಬರತಕ್ಕಂತಹ ಸರ್ಕ್ಯೂಲರ್‌ಗಳು. ಈ ನಾಲ್ಕು ಪರ್ಮಿಟಗಳು ಇಡೀ ರಾಜ್ಯದಲ್ಲಿ ಓಡಾಟವಾಗುತ್ತಿದೆ. ಎಲ್ಲೆಲ್ಲಿ ಓಡಾಡುತ್ತಿವೆ ಅಂದರೆ ಮಂಗಳೂರಿನಿಂದ ಬೆಂಗಳೂರಿಗೆ ಕೋಲಾರದಿಂದ ಮೈಸೂರಿಗೆ ಓಡಾಡುತ್ತಿವೆ. ಬೆಂಗಳೂರಿಂದ ಕೋಲಾರಕ್ಕೆ ಓಡಾಡುತ್ತಿವೆ. ಇದರ ಜೊತೆಗೆ ಗ್ರಾನೈಟ್ ಕರ್ಮಕಾಂಡ ಏಂದು ಮಾನ್ಯ ವಾಟಾಳ್‌ರವರು ಏನು ಹೇಳಿದರು ಇದು ಅದಕ್ಕಿಂತ ಕ್ರೂರವಾದದ್ದು. ದೀರ್ಘವಾಗಿ ಚರ್ಚೆಯಾಗುವುದಾದರೆ ನನ್ನ ಅಭ್ಯಂತರವಿಲ್ಲ. ಸರ್ಕ್ಯೂಲರ್ ಬಗ್ಗೆ ಹೇಳುವುದಾದರೆ ಸರಕಾರ ಒಂದನ್ನು ಸ್ಪಷ್ಟ ಮಾಡಬೇಕಾಗುತ್ತದೆ. ಗ್ರಾನೈಟ್ ಕೊಟ್ಟಿದೆಯೇ ಅಥವಾ ಮೈನ್ಸ್ ಅಂಡ್ ಜಿಯಾಲಜಿಯವರಿಗೆ ಕೊಟ್ಟಿದೆಯೇ ಇಲ್ಲವೇ ಅರಣ್ಯ ಇಲಾಖೆಗೆ ಕೊಟ್ಟಿದ್ದೇಯೇ ಎಂಬುದನ್ನು ತಿಳಿಸಬೇಕು. ಒಂದು ನಿದರ್ಶನವನ್ನು ಸ್ಪಷ್ಟವಾಗಿ ಹೇಳುತ್ತೇನೆ. 21ನೇ ಮೇ ತಿಂಗಳಲ್ಲಿ ನನ್ನ ಕ್ಷೇತ್ರದಲ್ಲಿ ಒಂದು ಘಟನೆ ನಡೆಯಿತು. ಗುಡಿ ಬಂಡೆ ತಾಲ್ಲೂಕು ಯಲ್ಲೋಡದಲ್ಲಿ ಇಡೀ ಜಗತ್ತಿನಲ್ಲಿಯೇ ಸುಪ್ರಸಿದ್ಧವಾದ ಕ್ವೀನ್ಸ್ ರೋಸ್ ಎನ್ನತಕ್ಕಂತಹ ಒಂದು ಗ್ರಾನೈಟ್ ಸಿಗುತ್ತದೆ. ಇಡೀ ಜಗತ್ತಿನಲ್ಲೇ ಅತ್ಯುತ್ತಮವಾದ ಗ್ರಾನೈಟ್ ಇದಾಗಿದೆ. 5-6 ವರ್ಷದಿಂದ ಅಲ್ಲಿ ಕಳ್ಳಸಾಗಾಣಿಕೆಯ ದಂಧೆ

ನಡೆಯುತ್ತಿತ್ತು. ನಾವು ಹೋಗಿ ಗಲಾಟೆ ಮಾಡಿದ್ದಕ್ಕೆ ಸ್ವಲ್ಪ ತಡೆಹಿಡಿದೆವು. 21ನೇ ತಾರೀಖು ನಾನು ಮತ್ತು ಕೃಷಿ ಸಚಿವರಾದ ಬೈರೇಗೌಡರೇ ಆ ಸ್ಥಳಕ್ಕೆ ನೇರವಾಗಿ ಭೇಟಿ ಕೊಟ್ಟು ಅದನ್ನೆಲ್ಲಾ ನೋಡಿದೆವು. ಪೀಸಗಳನ್ನು ಕಟ್ ಮಾಡಿದ್ದರು. ಅವರು ನಾವೆಲ್ಲಾ ಸೇರಿ ಅಧಿಕಾರಿಗಳಿಗೆ ಹೇಳಿದೆವು. ಡಿ.ಸಿ.ಯವರು ತಕ್ಷಣ ಪರ್ಮಿಟ್‌ನ್ನು ರದ್ದುಮಾಡಿದರು. ಡಿ.ಸಿ.ಯವರು ಪರ್ಮಿಟ್‌ನ್ನು ರದ್ದುಮಾಡಿ ಎರಡು ದಿವಸ ಆದಮೇಲೆ ಕೋಲಾರ ಜಿಲ್ಲೆಯಲ್ಲಿರುವ ಗಣಿ ಮತ್ತು ಭೂ ವಿಜ್ಞಾನದ ಅಧಿಕಾರಿಗಳು ಒಂದು ಪರ್ಮಿಟ್‌ನ್ನು ಇಷ್ಯೂ ಮಾಡಿ ಆ ಪರ್ಮಿಟ್ಟಿನ ಆಧಾರದಮೇಲೆ ಕಲ್ಲುಗಳ ಪೀಸ್‌ಗಳನ್ನೆ ಸಾಗಿಸಬಹುದು ಎಂದು ಅವರಿಗೆ ಆ ಪರವಾನಿಗೆಯನ್ನು ಕೊಟ್ಟರು. ಆದರೆ ನಾನು ಪೋಲೀಸಿನವರ ಮುಖಾಂತರ ಸಾಗಿಸಬಾರದು ಅದನ್ನು ಎಂದರೆ ಆ ಪರ್ಮಿಟ್‌ಗೆ ಪೋಲೀಸಿನವರು ತಡೆಹಾಕಿದರು. ನೇರವಾಗಿ ಗಣಿ ಮತ್ತು ಭೂ ವಿಜ್ಞಾನದ ಜಿಲ್ಲಾಧಿಕಾರಿ ನೇರವಾಗಿ ಪೋಲೀಸ್ ಸ್ಟೇಷನಗೆ ಬಂದು ಸರ್ಕಲ್ ಇನ್ಸಪೆಕ್ಟರ್ ಜೊತೆಯಲ್ಲಿ ವಾದಮಾಡಿ ನಾನು ಪರ್ಮಿಟ್ ಕೊಟ್ಟಿದ್ದೇನೆ, ನೀನು ಯಾವನೋ ಅದನ್ನು ತಡೆಯುವುದಕ್ಕೆ ಎಂದು ವಾದ ಮಾಡಿ ಅದನ್ನು ಸಾಗಿಸುವುದಕ್ಕೆ ವ್ಯವಸ್ಥೆ ಮಾಡಿದನು. ಆ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತೆ ದಿಕ್ಕುತೋಚದೆ ನನ್ನನ್ನು ಕೇಳಿದರು. ನೋಡಿ, ಡಿ.ಸಿ.ಯವರು ಅದನ್ನು ರದ್ದು ಮಾಡಿದ್ದಾರೆ ಎಂದರೆ ಡಿ.ಸಿ. ಯವರು ರದ್ದುಮಾಡುವುದಕ್ಕೆ ಡಿ.ಸಿ. ಯಾರು ಅದನ್ನು ರದ್ದುಮಾಡುವುದಕ್ಕೆ. ನಾನು ಪರ್ಮಿಟ ಕೊಟ್ಟಿದ್ದೇನೆ ಎಂದು ಹೇಳಿ ವಾದಮಾಡಿದರು. ಹೀಗಾಗಿ ಅಲ್ಲಿ ಏನಾಯಿತು. ಈ ಮೈನ್ಸ್ ಅಂಡ್ ಜಿಯಾಲಜಿಯವರು ನೀವು ಯಾವ ಆಧಾರದ ಮೇಲೆ ಪರ್ಮಿಟ್ ಕೊಟ್ಟಿರಿ ಎಂದು ರಾಜ್ಯದಲ್ಲಿರುವ ಡೈರೆಕ್ಟರ್ ಆಫೀಸಿನಲ್ಲಿ ಕಂಪ್ಯಾಕ್ಟ್ ಮಾಡಿದಾಗ ನಮಗೇ ಗೊತ್ತೇ ಇಲ್ಲ, ನಾವು ಯಾರಿಗೂ ಆ ರೀತಿಯಾದಂಥ ಆದೇಶವನ್ನು ಕೊಟ್ಟಿಲ್ಲ ಎಂದು ಇಲ್ಲಿ ಹೇಳಿದರು. ಕಡೆಗೆ ಮತ್ತೇನಾಯಿತು, ಇಲ್ಲಿ ರದ್ದಾಯಿತು. ರದ್ದಾದಮೇಲೆ ಮೈಸೂರು ಡಿವಿಜನ್ ನಲ್ಲಿರುವ ಒಬ್ಬ ಅಧಿಕಾರಿ ಆ ಕೋರ್ಟ್ ಆರ್ಡರ್ ಇದ್ದರೂ ಕೂಡ ಪರವಾನಿಗೆಯನ್ನು ಕೊಟ್ಟಿದ್ದಾರೆ, ಅದರ ಆಧಾರದ ಮೇಲೆ ನಾನು ಕೊಟ್ಟಿದ್ದೇನೆ ಎಂದರೆ ಇದು ಸ್ಪಷ್ಟವಾಗಿ ಈ ಪರವಾನಿಗೆಗಳನ್ನು ಕೊಡುವ ಸಂದರ್ಭದಲ್ಲಿ ಖೋಟಾ ಪರವಾನಿಗೆಗಳು ಒಂದೊಂದು ಇಲಾಖೆಯಿಂದ ಒಂದೊಂದು ರೀತಿಯಲ್ಲಿ ಬರುತ್ತಿವೆ. ಆದ್ದರಿಂದ ಸರ್ಕಾರ ಒಂದನ್ನು ಸ್ಪಷ್ಟಮಾಡಬೇಕು. ಯಾವ ಇಲಾಖೆಯವರಿಗೆ ನೀವು ನಿರ್ದಿಷ್ಟವಾಗಿ ಅಧಿಕಾರವನ್ನು ಕೊಟ್ಟಿದ್ದೀರಿ ಎನ್ನುವುದು. ಆದರೆ ಒಂದು ವಾದವನ್ನು ಸರ್ಕಾರ ಮಾಡಬಹುದು. ರೆವಿನ್ಯೂ ಭೂಮಿಯಲ್ಲಿರುವ ಎಂದರೆ ಸರ್ಕಾರಿ ಭೂಮಿಯಲ್ಲಿರುವ ಕಲ್ಲುಗಳಿಗೆ ನಾವು ಡಿ.ಸಿ.ಯವರಿಗೆ ಅಧಿಕಾರ ಕೊಡುತ್ತೇವೆ. ಫಾರೆಸ್ಟ ಡಿಪಾರ್ಟಿಮೆಂಟನಲ್ಲಿರತಕ್ಕಂಥವರಿಗೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಕೊಡುತ್ತೇವೆ, ಆದರೆ ಮೈನ್ಸ್ ಅಂಡ್ ಜಿಯಾಲಜಿಯವರಿಗೆ ಅಧಿಕಾರ ಯಾವ ಕಲ್ಲುಗಳ ಮೇಲೆ ಬರುತ್ತದೆ? ಇದು ಮುಖ್ಯವಾದ ಪ್ರಶ್ನೆ. ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿರುವ ಭೂಮಿಯನ್ನು ನೋಡುವುದಾದರೆ ಅದು ಡಿಸಿಗೆ ಬರುತ್ತದೆ. ಫಾರೆಸ್ಟ ಡಿಪಾರ್ಟಮೆಂಟನಲ್ಲಿರುವ ಫಾರೆಸ್ಟ್ ಡಿಪಾರ್ಟ್‌ಮೆಂಟ್. ಆದರೆ ಮೈನ್ಸ್ ಅಂಡ್ ಜಿಯಾಲಜಿಯವರಿಗೆ ಪ್ರತ್ಯೇಕವಾಗಿ ಒಂದು ನೆಲ ಕಲ್ಲನ್ನು ಸೃಷ್ಟಿಮಾಡಿದ್ದೀರೋ ಎರಡನೆಯ ಅಂಶ. ಮಾನ್ಯ ಬೈರೇಗೌಡರು ಪರ್ಮಿಟ್ಟ್‌ನ್ನು ರದ್ದುಮಾಡಿದರು. ಮೈನ್ಸ್ ಅಂಡ್ ಜಿಯಾಲಜಿಯವರು ಇನ್ನೊಂದು ಪರ್ಮಿಟ್ಟ್‌ನ್ನು ಅದಕ್ಕೆ ಕೊಟ್ಟರು. ನಾನು ಮತ್ತು ಮಾನ್ಯ ಬೈರೇಗೌಡರು ಸ್ವತಃ ಜಾಗಕ್ಕೆ

ಹೋಗಿದ್ದೆವು. ಇಲ್ಲಿ ಇರುವ ಪ್ರಶ್ನೆ ಇನ್ನೊಂದು ವಾದ ಎಂದರೆ ನಾವು ಕಳ್ಳ ಸಾಗಾಣಿಕೆಯನ್ನು ತಡೆಹಿಡಿಯುತ್ತೇವೆ ಎಂದು ಸರ್ಕಾರ ಹೇಳುತ್ತದೆ. ಹಾಗಾದರೆ ಸರ್ಕಾರ ಸಾಗಾಣಿಕೆ ಮಾಡುತ್ತದೆಯೇ? ಯಾವ ಆಧಾರದಮೇಲೆ ನಾವು ಅದನ್ನು ಹರಾಜು ಹಾಕಿ ಅದನ್ನು ಮಾರಾಟ ಮಾಡುತ್ತೇನೆ ಎಂದು ಬಹುಶಃ ಸರ್ಕಾರದ ಅಭಿಪ್ರಾಯ ಇರಬಹುದು. ನಾನು ಇದನ್ನು ಸ್ಪಷ್ಟವಾಗಿ ವಿರೋಧ ಮಾಡುತ್ತೇನೆ. ಸರ್ಕಾರದವರು ಸಾಗಾಣಿಕೆ ಮಾಡಬಾರದು, ಪ್ರೈವೇಟ್‌ನವರಿಗೂ ಲೈಸೆನ್ಸ್‌ಗಳನ್ನು ಕೊಟ್ಟು ಅದನ್ನು ಸಾಗಾಣಿಕೆ ಮಾಡಬಾರದು. ಏಕೆಂದರೆ ಗ್ರಾನೈಟ್ ಎನ್ನುವುದು ನಮಗೆ ಪ್ರಕೃತಿಯಲ್ಲಿ ಸಿಗುವ ಅತಿ ಮುಖ್ಯವಾದ ಒಂದು ನ್ಯಾಚುರಲ್ ರಿಸೋರ್‌ಸಸ್. ಅದನ್ನು ಹಾಳು ಮಾಡಲಿಕ್ಕೆ ಸರ್ಕಾರವೂ ಅದರಲ್ಲಿ ಕೈಹಾಕಬಾರದು. ಖಾಸಗಿಯವರೂ ಅದರಲ್ಲಿ ಕೈಹಾಕಬಾರದು. ಮತ್ತೆ ಇಲ್ಲಿ ಮುಖ್ಯವಾಗಿ ನೀವೇನು ಅಲ್ಲಿ ದಂಧೆ ನಡೆಯುತ್ತಿದೆ, ಅದನ್ನು ತಕ್ಷಣವೇ ಸರ್ಕಾರ ಸಂಬಂಧಪಟ್ಟಅಧಿಕಾರಿಗಳಿಗೆ ಆದೇಶ ಕೊಡಬೇಕು. ಯಾವುದೇ ಕಾರಣದಿದಂದ ಅಲ್ಲಿ ತೆಗೆದಿರತಕ್ಕಂಥ ಆ ಪೀಸ್‌ಗಳನ್ನು ಸಾಗಿಸಬಾರದು. ಯಾರಿಗೂ ಪರವಾನಿಗೆಗಳನ್ನು ಕೊಡಬಾರದು ಎಂದು ಹೇಳುವುದನ್ನು ಸರ್ಕಾರ ಇವತ್ತು ಸ್ಪಷ್ಟಪಡಿಸಬೇಕು ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಭಾನಾಯಕರು ತಾವೇನಾದರೂ ಇದಕ್ಕೆ ಕಾಂಪ್ರೆಹೆನ್ಸೀವ್ ಸ್ಟೇಟ್‌ಮೆಂಟ್‌ನ್ನು ಮಾಡುತ್ತೀರೋ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಭಾಧ್ಯಕ್ಷರೇ, ನಾನು ಎರಡು ಮೂರು ಸಂಗತಿ ಹೇಳಿದ್ದೇನೆ ಒಂದು ಈ ಸರ್ಕಾರ ನಾವು ಯಾವುದೇ ಆರೋಪವನ್ನು ಮಾಡಿದಾಗ ದಾಖಲೆಗಳನ್ನು ಕೇಳುತ್ತದೆ. ಸ್ವಾಭಾವಿಕ. ಯಾರೇ ಅಲ್ಲಿ ಕುಳಿತಿದ್ದರೂ ಅದನ್ನು ಕೇಳಲೇಬೇಕು. ಈಗ ಫೇಕ್ ಪರ್ಮಿಟ್ ಆಧಾರದಮೇಲೆ 200 ಗ್ರಾನೈಟ್ ಕಲ್ಲುಗಳನ್ನು ಕಾನೂನುಬಾಹಿರವಾಗಿ ಸಾಗಿಸಲು ವ್ಯವಸ್ಥೆಯಾಗಿದೆ. ಮದ್ರಾಸ್ ಮತ್ತು ಮಂಗಳೂರುಗಳಲ್ಲಿ ಸೀಜ್. ಆಗಿದೆ. ಎರಡನೆಯದು, ದೂರವಾಣಿ ಮೂಲಕ ಮೌಖಿಕವಾಗಿ ಯಾವುದೇ ಕಾರಣಕ್ಕೆ ಫೋನ್ ಬಂದರೆ ಮಂತ್ರಿಕಛೇರಿಯಿಂದ, ನಿರ್ದೇಶಕರ ಕಛೇರಿಯಿಂದ ಪಾಲಿಸಬೇಡಿ ಎಂದು ಸರ್ಕ್ಯೂಲರ್ ಇಷ್ಯೂ ಮಾಡಿದ್ದಾರೆ. ಇವೆಲ್ಲಾ ಆಧಾರದಮೇಲೆ ನಾನು ಮಿನಿಮಮ್ ಇವರನ್ನು ಕೇಳುವಂಥದ್ದೂ, ಒಂದು ಜಾಯಿಂಟ್ ಹೌಸ್ ಕಮಿಟಿಯನ್ನು ಮಾಡಿ. ಈ ಒಂದು ಸಂಶಯಕ್ಕೆ ಕಾರಣವಾಗಿರುವ ಆ ಮಂತ್ರಿಯನ್ನು ಈ ಒಂದು ತನಿಖೆಯಾಗುವವರೆಗೆ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ವರದಿಯನ್ನು ಕೊಡುವವರೆಗೂ ಅವರನ್ನು ಮಂತ್ರಿಮಂಡಲದಲ್ಲಿ ಇಟ್ಟುಕೊಳ್ಳದೆ ಕೈಬಿಡಬೇಕು ಎಂದು ಒತ್ತಾಯ ಮಾಡುವುದಕ್ಕೋಸ್ಕರ ನಾವೂ ಧರಣಿ ಕುಳಿತುಕೊಳ್ಳುತ್ತೇವೆ. ನಿನ್ನೆಯಿಂದ ನಮ್ಮ ಕಾಂಗ್ರೆಸ್ ಸ್ನೇಹಿತರು ಧರಣಿಕುಳಿತಿದ್ದಾರೆ. ಇದುವರೆಗೆ ನಮ್ಮ ಕಾಂಗ್ರೆಸ್ ಸ್ನೇಹಿತರು ಬಿಜೆಪಿಯವರು ನಮಗೆ ಬೆಂಬಲ ಕೊಡುವುದಿಲ್ಲ ಎನ್ನುತ್ತಿದ್ದರು. ನೀವು ನಮಗೆ ಬೆಂಬಲ ಕೊಡದಿದ್ದರೂ ನಾವು ನಿಮಗೆ ಬೆಂಬಲ ಕೊಟ್ಟು ಎತ್ತಿರುವ ಇಷ್ಯೂ ಅತ್ಯಂತ ಪ್ರಮುಖವಾಗಿರುವುದು. ಅದಕ್ಕೋಸ್ಕರ ಜಾಯಿಂಟ್ ಹೌಸ್ ಕಮಿಟಿಯನ್ನು ಮಾಡಬೇಕು. ಎರಡನೆಯದು ಆ ಮಂತ್ರಿಯನ್ನು ಕೈಬಿಡಬೇಕು ಎಂದು ಹೇಳಿ ಧರಣಿ ಕುಳಿತುಕೊಳ್ಳುತ್ತೇವೆ ಸ್ವಾಮಿ.

ಅಧ್ಯಕ್ಷರು : ಅವರು ಉತ್ತರ ಹೇಳುವುದು ಬೇಡವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಏನೂ ಹೇಳುವುದೇ ಇಲ್ಲ.

(ಈ ಹಂತದಲ್ಲಿ ಬಿಜೆಪಿ ಪಕ್ಷದ ಎಲ್ಲಾ ಸದಸ್ಯರೂ ಎದ್ದು ಬಂದು ಬಾವಿಯಲ್ಲಿ ಧರಣಿ ಕುಳಿತರು).

ಅಧ್ಯಕ್ಷರು : ಇದು ಎಂಥ ಸಂಸದೀಯ ನಡವಳಿಕೆ ಎಂಬುದು ನನಗೆ ಅರ್ಥವೇ ಆಗುವುದಿಲ್ಲ. ಮಾನ್ಯ ಶಿವಪ್ಪನವರೇ, ಇಷ್ಟು ಹೇಳಿದರಲ್ಲಾ, ಅವರು ಉತ್ತರ ಹೇಳುವುದು ಬೇಡವೇ?

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ನೀವು ಉತ್ತರ ಕೇಳುವುದಕ್ಕೆ ಬಂದಿದ್ದೀರೋ,ಧರಣಿ ಮಾಡುವುದಕ್ಕೆ ಬಂದಿದ್ದೀರೋ ಶಿವಪ್ಪನವರೇ? ನೀವು ಮೊದಲೇ ಧರಣಿ ಮಾಡಬೇಕು ಎಂದು ತೀರ್ಮಾನ ಮಾಡಿಕೊಂಡು ಬಂದಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಉತ್ತರ ಹೇಳುವುದಕ್ಕೆ ಮುಂಚೆಯೇ? ನಾವು ಧರಣಿ ಬಹಳ ಸಾರಿ ಮಾಡಿದ್ದೇವೆ. ನೀವು ಧರಣಿ ಮಾಡುವುದಕ್ಕೇನು ಬಂದಿರುವುದು. ಇದು ಧರಣಿ ಪಾರ್ಟಿ.

ಶ್ರೀ ಯು.ಆರ್. ಸಭಾಪತಿ : ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತಂದಿರುವವರು ಕಾಂಗ್ರೆಸ್‌ನವರು. ಆದರೆ ಧರಣಿ ಕುಳಿತುಕೊಳ್ಳುವುದು ಬಿಜೆಪಿಯವರು.

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್ : ಎಲ್ಲರ ಜೊತೆಯಲ್ಲಿ ಮಾತನಾಡಿ ಧರಣಿ ಮಾಡಿದರೆ ಬರುತ್ತಿತ್ತು. ನಮಗೆ ಧರಣಿ ಮಾಡುವುದಕ್ಕೆ ಬರುವುದಿಲ್ಲವೇನು? ನಮ್ಮನ್ನು ಕೇಳಬಹುದಾಗಿತ್ತು. ನಾವು ನಿಮ್ಮ ಹಿಂದೆಯೇ ಬರುತ್ತಿದ್ದೆವು. ಪ್ರಾಮಾಣಿಕವಾಗಿ ವಿರೋಧ ಪಕ್ಷದ ನಾಯಕರ ಹಿಂದೆ ಕೈಕಟ್ಟಿಕೊಂಡು ಬರುತ್ತಿದ್ದೆವು. ನಮ್ಮನ್ನು ಕೇಳುವ ಸೌಜನ್ಯವನ್ನು ಅವರು ತೋರಿಸದೆ ಎದ್ದು ಬಂದರು. ಈ ರೀತಿ ಸರಿಯಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ನಂಜೇಗೌಡರು. ನಿನ್ನೆ ಒಂದು ಉದಾಹರಣೆಯನ್ನು ಹೇಳಿದರು. ಅವರಪ್ಪನನ್ನು ಕೇಳಿದರಂತೆ, ನೀನು ಹೋಗು ಎಂದರೆ ಹೋಗುತ್ತೇನೆ. ಬೇಡ ಎಂದರೂ ಹೋಗುತ್ತೇನೆ ಜಾತ್ರೆಗೆ ಹೋಗಲಾ ಎಂದು. ಹಾಗೆ ಇವರು. ನೀನು ಹೋಗು ಎಂದರೂ ಹೋಗುತ್ತೇನೆ. ಬೇಡ ಎಂದರೂ ಹೋಗುತ್ತೇನೆ, ಕೇಳಲಾ ಎಂದು ಉತ್ತರ ಹೇಳುವುದಕ್ಕೆ ಮುಂಚೆ ಬಂದು ಕುಳಿತಿದ್ದಾರೆ.

ಶ್ರೀ ಆರ್. ಬಿ. ಚಾಲಪ್ಪ : ಇವರು ಹೊಸ ಹೊಸ ಸಂಪ್ರದಾಯ ಹಾಕುವುದಕ್ಕೆ ಶುರುಮಾಡಿದ್ದಾರೆ ಇತ್ತೀಚೆಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ನಾನು ಪ್ರಸ್ತಾಪಮಾಡಿದ್ದೇವೆ. ಮತ್ತು ಈ ವಿಷಯವನ್ನು ಪ್ರಸ್ತಾಪ ಮಾಡುವಾಗ ಸ್ಪೆಷಿಫಿಕ್ ಆಗಿ 22ನೇ ಜುಲೈಯಲ್ಲಿ ಇಷ್ಯೂ ಮಾಡಿದ ಸರ್ಕ್ಯುಲರ್ ಬಗ್ಗೆ ಮತ್ತು ಸುಮಾರು ನೂರಾರು ಫೇಕ್ ಪರ್ಮಿಟ್ಸ್ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಿಂದ, ಕೆಲವು ರೆವಿನ್ಯೂ ಡಿಪಾರ್ಟ್‌ಮೆಂಟಿನಿಂದ ಇಷ್ಯೂ ಆಗಿದ್ದರ ಬಗ್ಗೆ ನಾವು ನೇರವಾಗಿ ಪ್ರಸ್ತಾಪ ಮಾಡಿದ್ದೇವೆ. ಆ ಇಪ್ಪತ್ತು ಜನ ಪ್ರಮುಖರು ಯಾರಿದ್ದಾರೆ,

4.30 ಪಿ.ಎಂ

ಅವರು ಸಾಕ್ಷಿದಾರರು ಎಂದು ಮಂತ್ರಿಗಳೇ ಸ್ಟೇಟಮೆಂಟ್‌ನ್ನು ಕೊಟ್ಟಿದ್ದಾರೆ. ಸುಮಾರು ಇದರಲ್ಲಿ ನೂರು ಕೋಟಿ ರೂಪಾಯಿ ಅವ್ಯವಹಾರವಾಗಿದೆ ಎಂದು ಕೂಡ ಹೆಚ್ಚು ಕಡಿಮೆ ಇವರ ಬಾಯಿಂದಲೇ ಬಂದಹಾಗೆ ಆಗಿದೆ. ಹೀಗೆ ಕೋಟ್ಯಂತರ ರೂಪಾಯಿ ಫೇಕ್ ಪರ್ಮಿಟ್ ಮೇಲೆ ಹೋಗಿದೆ ಎಂದು ಅವರೇ ಹೇಳಿದಾಗ ಇವತ್ತು ನಾವು ನೇರವಾಗಿ ಅವರಿಗೆ ಕೇಳುತ್ತಿದ್ದೇವೆ, ನೀವು ಸ್ಟೇಟ್‌ಮೆಂಟ್ ಮಾಡಿ. ನೀವು ಸ್ಟೇಟ್‌ಮೆಂಟ್ ಮಾಡಿದ ಮೇಲೆ ನಾವು ಸವಿಸ್ತಾರವಾಗಿ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವ ಉದ್ದೇಶ ನಮ್ಮದು. ಪುನಃ ಈ ಸದನದ ಸಮಯವನ್ನು ಹಾಳು ಮಾಡಬೇಕು ಎನ್ನತಕ್ಕ ಉದ್ದೇಶ ಇರಲಿಲ್ಲ. ಅವರಿಂದ ಒಂದು ಸ್ಪೆಸಿಫಿಕ್ ಆದ ಉತ್ತರ ಬೇಕಾಗಿತ್ತು ಮತ್ತು ಇದರೊಳಗೆ ಏನು ಅಡಗಿದೆ? ಎಷ್ಟರಮಟ್ಟಿಗೆ ದುರಪಯೋಗ ಮಾಡಿಕೊಂಡಿದ್ದಾರೆ, ಎಷ್ಟರಮಟ್ಟಿಗೆ ರೆವಿನ್ಯೂ ಲಾಸ್ ಆಗಿದೆ ಮತ್ತು ಯಾವ ರೀತಿಯಾಗಿ ನೇರವಾಗಿ ಎಷ್ಟು ಓರಲ್ ಇನ್‌ಸ್ಟ್ರಕ್ಷನ್ಸ್ ಹೋಗಿವೆ, ಅದರೊಳಗೆ ಫೇಕ್ ಪರ್ಮಿಟ್ ಎಷ್ಟು ಇವೆ ಅಥವಾ ಇರತಕ್ಕ ಯಾವ ಫೇಕ್ ಪರ್ಮಿಟ್ ಮೇಲೆ ಹೋದಂತಹವಕ್ಕೆ ಮತ್ತೆ ಪುನಃ ಇವರು ಏನಾದರೂ ಸೀಜ್ ಮಾಡಿದ್ದಕ್ಕೆ ಪುನಃ ಏನಾದರೂ ಬಿಡುಗಡೆ ಮಾಡಿಸುವುದಕ್ಕೆ ಪ್ರಯತ್ನ ಮಾಡಿದ್ದಾರೋ ಹೇಗೆ ಅಥವಾ ಅರೆಸ್ಟ್ ಮಾಡಿದಂತಹ ಜನರನ್ನು ಬಿಡುಗಡೆ ಮಾಡಿಸತಕ್ಕ ಪ್ರಯತ್ನ ಮಾಡಿದ್ದಾರೇನೋ? ಈಗಾಗಲೇ ಜಾಧವ ಎನ್ನವವರಿಗೆ ಯಾರು ಪ್ರಿಂಟ್ ಮಾಡಿದ್ದರು ಅವರನ್ನು ಈಗ ಅರೆಸ್ಟ ಮಾಡಿದ್ದಾರೆ. ಉಳಿದಂತಹವರನ್ನು

ಅಧ್ಯಕ್ಷರು : ನಾನು ಒಂದು ಮಾತು ಹೇಳುತ್ತೇನೆ. ತಾವು ದಯಮಾಡಿ ಕುಳಿತುಕೊಳ್ಳಿ. ಸಂಸದೀಯ ನಡವಳಿಕೆಗಳಲ್ಲಿ ನೀವು ಹೇಳುವುದಕ್ಕೆ ಅವಕಾಶ ಕೇಳುತ್ತೀರಿ. ನಾನು ನಿಯಮಾವಳಿಗಳಿಗೆ ಅಂಟಿಕೊಳ್ಳದೇ ವಿಷಯದ ಪ್ರಾಮುಖ್ಯತೆಯನ್ನು ಗಮನಿಸಿ ವಿಷಯ ಪ್ರಸ್ತಾಪ ಮಾಡಲಿಕ್ಕೆ ನಿಮಗೆ ಅವಕಾಶ ಕೊಡಬೇಕಾದದ್ದು ನನ್ನ ಕರ್ತವ್ಯ, ಧರ್ಮ. ನಾನು ಅದನ್ನು ಮಾಡಿದ್ದೇನೆ. ತಾವು ಎಲ್ಲರೂ ಮಾತನಾಡಬೇಕು ಎಂದು ಹೇಳಿದಿರಿ. ತಾವೆಲ್ಲರೂ ತಮ್ಮವಾದ ಏನು ಇತ್ತು ಅದನ್ನು ಮಂಡನೆ ಮಾಡಿ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ. ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಸಂಬಂಧಪಟ್ಟ ಸಚಿವರು ಮೇಲ್ಮನೆಯಲ್ಲಿದ್ದರೂ ಸರ್ಕಾರದ ಪರವಾಗಿ ಎಲ್ಲಾ ಜವಾಬ್ದಾರಿಯನ್ನು

ಹೊತ್ತುಕೊಳ್ಳಬೇಕಾಗಿದ್ದವರು ಸರ್ಕಾರದ ಅತ್ಯುನ್ನತ ವ್ಯಕ್ತಿ ಅವರು ಸರ್ಕಾರದ ಪರವಾಗಿ ಇಲ್ಲಿ ಕುಳಿತಿದ್ದಾರೆ. ಅವರು ಒಂದು ಉತ್ತರ ಕೊಡುವುದಕ್ಕಾದರೂ ನಿಮ್ಮ ಸ್ನೇಹಿತರು ಕಾಯಬೇಕಾಗಿತ್ತು. ದಯ ಮಾಡಿ ಕೇಳಿ. ಸರ್ಕಾರ ಉತ್ತರ ಕೊಡುವುದು, ಸರ್ಕಾರದ ಉತ್ತರ ನಿಮಗೆ ಸರಿಯಾಗಲಿಲ್ಲ ಸಮಾಧಾನ ಆಗಲಿಲ್ಲ ಎಂದರೆ ನೀವು ಧರಣಿ ಮಾಡುವುದು ಇನ್ನೊಂದು ಮಾಡುವುದು ಪ್ರಜಾತಂತ್ರದಲ್ಲಿ ಇವೆಲ್ಲಾ ಇರುವುದೇ. ಉತ್ತರ ಕೊಡವುದಕ್ಕೆ ಮೊದಲೇ ನೀವು ಬಂದರೆ ಸರ್ಕಾರದ ಮೇಲೆ ನೀವು ಪ್ರತಿಭಟನೆ ಮಾಡಿದ ಹಾಗೆ ಆಗುವುದಿಲ್ಲ. ಹಾಗಾದರೆ ಉತ್ತರ ಹೀಗೇಯೇ ಬರುತ್ತದೆ ಎಂದು ಮೊದಲೇ ನೀವು ತೀರ್ಮಾನ ಮಾಡಿಬಿಟ್ಟಿದ್ದೀರಿ. ಅಥವಾ ಎಲ್ಲರನ್ನೂ ಒಂದೇಸಾರಿಗೆ ಸರ್ಕಾರದ ಜೊತೆಗೆ ಸೇರಿಸಿದ್ದಿರಿ? ಸರಿ ಹೋಗುವುದಿಲ್ಲ ಇದು. ಸನ್ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಎಲ್ಲಾ ಹಿರಿಯ ಮುಖಂಡರು ತಾವು ಯಾರು ಭಾರತೀಯ ಜನತಾ ಪಕ್ಷದ ಸದಸ್ಯರು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ. ಇದು ನಮ್ಮ ಕಲಾಪಗಳು ಹೊರಗೆ ಪ್ರತಿಬಿಂಬ ಆದಾಗ ನಮಗೆ ಯಾರಿಗೂ ಗೌರವ ತರುವುದಿಲ್ಲ. ನಾನು ತಮ್ಮಲ್ಲಿ ಕೈಜೋಡಿಸಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದು ಸಂಸದೀಯ ನಡೆವಳಿಕೆಗಳಿಗೆ ಸರಿಹೊಂದತಕ್ಕಂಥ ಪ್ರವೃತ್ತಿ ಅಲ್ಲ. ಒಂದು ಸರ್ಕಾರಕ್ಕೆ ಉತ್ತರ ಕೊಡತಕ್ಕಂತಹ ಅವಕಾಶವನ್ನೂ ಕೊಡದೇ ಬಂದು ಧರಣಿ ಕುಳಿತುಕೊಳ್ಳತಕ್ಕದ್ದು ಎಂದರೆ ಹೇಗೆ? ನೀವೇ ನಾಳೆ ಮುಖ್ಯಮಂತ್ರಿಗಳು ಆಗುತ್ತೀರಿ, ಹಾಗಾದರೆ ನಾಳೆ ಹೀಗೆಯೇ ನೀವು ಮಾಡುತ್ತಿರೋ? ಇಲ್ಲಿ ವೈರಲೆಸ್ ಸೆಟ್ ಇಟ್ಟುಕೊಂಡು ಕೇಳಿದತಕ್ಷಣ ಹಾಗೆಯೇ ಇನಫಾರ್ಮೇಷನ್ ಕೊಡುತ್ತೀರೋ? ಏನಾಗಬಹುದು ಹೇಳಿ ನಮ್ಮ ಪರಿಸ್ಥಿತಿ ಹೀಗೆ ಆಗುತ್ತಾ ಹೋದರೆ? ಯಾರನ್ನು ಯಾರೂ ತಡೆಯುವುದಕ್ಕೆ ಆಗುವುದಿಲ್ಲ. ಪ್ರತಿ ಒಂದು ವಿಚಾರವನ್ನೂ ಪ್ರಸ್ತಾಪ ಮಾಡುವುದು ಮಾಡಿಬಿಟ್ಟು ಬಂದು ಧರಣಿ ಕುಳಿತರೆಕೊಂಡರೆ ಅಲ್ಲಿಗೆ ಮುಗಿದು ಹೋಯಿತಲ್ಲಾ, ಉತ್ತರ ಕೊಡಬೇಕಾದದ್ದೇ ಇಲ್ಲವಲ್ಲಾ. ಪೂರ್ವನಿಶ್ಚಯ ತೀರ್ಮಾನಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ನೀವು ಒಂದು ಹಂತ ತಲುಪುವುದಾದರೆ ನಾವೆಲ್ಲಾ ಇರತಕ್ಕ ಅಗತ್ಯ ಇಲ್ಲ. ನಾನು ಈಗ ಅಜರ್ನ ಮಾಡುವುದು ಎದ್ದು ಹೋಗುವುದು ಅದೆಲ್ಲಾ ಬೇರೆ ಪ್ರಶ್ನೆ. ಆದರೆ ಈ ರೀತಿಯ ಒಂದು ವಾತಾವರಣವನ್ನು ನಾವು ಸದನದಲ್ಲಿ ಸೃಷ್ಟಿ ಮಾಡಿದರೆ ನಾವು ಯಾರು ತಲೆ ಎತ್ತಿಕೊಂಡು ಗೌರವದಿಂದ ಹೊರಗಡೆ ಹೋಗವುದಕ್ಕೆ ಆಗುತ್ತದೆ ಎಂಬುದನ್ನು ದಯಮಾಡಿ ನನಗೆ ಸಮಾಧಾನ ಕೊಡಿ. ನಿಮ್ಮಲ್ಲರನ್ನೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನದ ಪ್ರತಿಷ್ಟೆ ಏನಾಗಬಹುದು? ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ದಯಮಾಡಿ ತಮ್ಮ ಸ್ಥಾನಗಳಿಗೆ ಹಿಂದಿರುಗಿ ಸರ್ಕಾರದ ಪರವಾಗಿ ಅವರು ಉತ್ತರ ಕೊಡಲು ಅವಕಾಶ ಕೊಡಿ. ಸರ್ಕಾರದ ಉತ್ತರ ನಿಮಗೆ ಬೇಸರ ಆದರೆ, ನಿರಾಶೆ ಆದರೆ ನಿಮಗೆ ಸಮಾಧಾನ ಇಲ್ಲದೇ ಹೋದರೆ ನೀವು ನಿಮ್ಮ ಹಕ್ಕನ್ನು ಚಲಾಯಿಸುವುದಕ್ಕೆ ನಾನು ಅಡ್ಡ ಬರುವುದಿಲ್ಲ. ಅದು ನಿಮ್ಮಸ್ವಾತಂತ್ರ್ಯ. ಈಗ ನೀವು ಮಾಡಿರತಕ್ಕದ್ದು ಆತುರದ ಕ್ರಮ. ದಯಮಾಡಿ ತಮ್ಮ ಸ್ಥಾನಗಳಿಗೆ ಹಿಂದಿರುಗಿಬೇಕೆಂದು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಯಡಿಯೂರಪ್ಪನವರೇ, ತಾವು ಬಂದು ಬಿಟ್ಟಿರಿ ಅವರೆಲ್ಲರನ್ನೂ ಬಿಟ್ಟು.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆಂದರೆ ಇಲ್ಲಿಂದ ಹೊರಟು ಹೋಗೋಣ ಎಂದು.

ಅಧ್ಯಕ್ಷರು : ನಾನು ಪ್ರತಿಪಕ್ಷ ನಾಯಕರಲ್ಲಿ ಏನು ವಿನಂತಿ ಮಾಡಿಕೊಳ್ಳತ್ತೇನೆ ತಾವು ಸರ್ಕಾರದ ಉತ್ತರವನ್ನು ಕೇಳಿ. ನೀವು ಇಲ್ಲೇ ಕುಳಿತುಕೊಳ್ಳತಕ್ಕದ್ದು ಆದರೂ ಮಾಡಿ ಹೊರಗೆ ಹೋಗತಕ್ಕದ್ದಾದರೂ ಮಾಡಿ. ಅದ ನಿಮ್ಮ ಸ್ವಾತಂತ್ರ್ಯ, ನಿಮ್ಮ ಹಕ್ಕು ನೀವು ಕಷ್ಟಪಟ್ಟು ಒಳಗೆ ಬರುವುದಕ್ಕೆ ಜನರಿಂದ ಅನುಮತಿ ಪಡೆದು ಸಂಪಾದಿಸಿಕೊಂಡಿರತಕ್ಕ ಹಕ್ಕು. ಅದನ್ನು ಕಳೆದುಕೊಳ್ಳಬೇಡಿ. ಅದು ನಿಮ್ಮ ಹಕ್ಕು. ಅದನ್ನು ನಾನು ನಿರ್ದೇಶನ ಮಾಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ದಯಮಾಡಿ ಕ್ಷಮಿಸಬೇಕು. ತಾವು ಹೇಳುತ್ತಿರುವುದನ್ನು ನೋಡಿದರೆ ನಾವೇನೋ ಅಪರಾಧ ಮಾಡಿದಂತೆ ಅಲ್ಲ. ಕಾರಣ ಇದೆ ಹೇಳುತ್ತೇನೆ. ದಯಮಾಡಿ ತಮ್ಮ ಪೀಠದಿಂದ ಅಧಿಕೃತ ವಿರೋಧ ಪಕ್ಷ ನಾವು ತೆಗೆದುಕೊಂಡ ನಿಲುವಿನ ಬಗ್ಗೆ ತಾವೇನಾದರೂ ಆ ರೀತಿ ಹೇಳಿಬಿಟ್ಟರೆ ರಾಜ್ಯದ ಜನ ಅದನ್ನು ತಪ್ಪು ರೀತಿಯಲ್ಲಿ ಗ್ರಹಿಸುತ್ತಾರೆ ಎನ್ನುವ ಭಯ ನನಗೆ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ನಾನು ಏಕೆ ಮಾಡಿದೆ? ಆಕಸ್ಮಾತ್ ತಾವು ಇಲ್ಲಿದ್ದರೂ ಇದನ್ನೇ ಮಾಡುತ್ತಿದ್ದಿರಿ. ಏಕೆ ಹೇಳುತ್ತೇನೆ ಅಂದರೆ, ಆ ಮನೆಯಲ್ಲಿ ಒಂದು ವಿಚಾರ ಬಂತು. ಒಂದು ಪೊಲಿಟಿಕಲ್ ಪಾರ್ಟಿ ರಾಜ್ಯದ ಜನರ ಹಿತವನ್ನು ಕಾಪಾಡುವ ದೃಷ್ಟಿಯಿಂದ ನಾನು ಯಾವ ರೀತಿ ಕಾರ್ಯಕ್ರಮವನ್ನು ರೂಪಿಸಬೇಕು, ಸತ್ಯಾಗ್ರಹ ಯಾವಾಗ ಮಾಡಬೇಕು ವಾಕೌಟ್ ಯಾವಾಗ ಮಾಡಬೇಕು, ನಾನು ಆ ಕಡೆ ಈ ಕಡೆ ಬೆಂಬಲ ಬೇಕು ಎಂದು ಕೇಳುವುದಿಲ್ಲ. ನಾನು ಸರಿಯಾದ ತರದಲ್ಲಿ ಮಾಡುತ್ತೇನೆ. ಆದರೆ ನಮ್ಮ ಕಾಂಗ್ರೆಸ್ ಸ್ನೇಹಿತರು ನಿನ್ನೆಯಿಂದ ಸಭಾಪತಿಯವರು ಹೊರಗಡೆ ಹೊರಡುವಂತಹ ಸಮಯದಲ್ಲಿ ಈ ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿ ಧರಣಿ ಕುಳಿತಿದ್ದಾರೆ. ನಾನೇನಾದರೂ ಈ ಸಂದರ್ಭದಲ್ಲಿ ಪಕ್ಷ ತಂದು ಅವರು ಕಾಂಗ್ರೆಸನವರು ಪ್ರಸ್ತಾಪ ಮಾಡಿದ್ದಾರೆಂತಹದ್ದು ನನಗೇನೂ ಅದಕ್ಕೆ ಮಹತ್ವ ಬರುವುದಿಲ್ಲ. ಎನ್ನುವ ಕಾರಣಕ್ಕೋಸ್ಕರು ನಾನು ತೆಗೆದುಕೊಳ್ಳುವಂತಹ ತೀರ್ಮಾನದಿಂದ ಒಂದು ಕ್ಷಣ ಹಿಂದೆ ಮುಂದೆ ನೋಡಿದರೆ ಅಪರಾಧ ಆದೀತು ಎಂದು ಹೇಳಿ ನಮ್ಮ ಸ್ನೇಹಿತರು ಅಲ್ಲಿರುವಂತಹವರಿಗೂ ಸಹ ನಿನ್ನೆ ಕಾಂಗ್ರೆಸನವರು ಧರಣಿ ಕುಳಿತಾಗ ನೀವು ಸಹ ಧರಣಿ ಕುಳಿತುಕೊಳ್ಳಬೇಕಾಗಿತ್ತು ಎಂದು ನಮ್ಮ ಬಿಜೆಪಿ ಸ್ನೇಹಿತರಿಗೆ ಹೇಳಿದೆ. ಆಗದಂತೆ ಕಟ್ಟೆಚ್ಚರ ವಹಿಸಬೇಕಾದಂತಹದು ಅಧಿಕೃತ ವಿರೋಧ ಪಕ್ಷ ನಮ್ಮ ಕರ್ತವ್ಯ ಆಗಬೇಕಾಗಿತ್ತು ನಮ್ಮ ಕೆಲಸ ಆಗಬೇಕಾಗಿತ್ತು ಎಂದು ಹೇಳಿ ನಮ್ಮ ಕಾಂಗ್ರೆಸ್ ಸ್ನೇಹಿತರು ಎಲ್ಲಿ ಆಮೇಲೆ ಅವರು ಕುಳಿತಿದ್ದು ನೋಡಿ ನಮ್ಮ ಹಿಂದೆ ಬರುತ್ತಿದ್ದಾರೆ ಎಂದು ಹೇಳಿ ಒಳಗೆ ಕೂರಿಸಿಕೊಳ್ಳಲು ಹಿಂದೆ ಮುಂದೆ ನೋಡುತ್ತಾರೇನೋ ಎಂದು ನಾವೇ ಮುಂದೆ ಹೋದೆವು. ಅವರ ಕೆಲಸ ನಾವು ಮಾಡಿದ್ದೇವೆ, ಆಮೇಲೆ ಅವರು ಬರಲಿ. ಏಕೆಂದರೆ ತಪ್ಪು ಅಭಿಪ್ರಾಯ ಬರಬಾರದು.

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ಅವರನ್ನು ಹಿಂದೆ ಹಾಕಿ ನೀವೇ ಮುಂದೆ ಹೋಗಬೇಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮುಖ್ಯಮಂತ್ರಿಗಳಲ್ಲಿ ಇಷ್ಟೇ ಒತ್ತಾಯ ಮಾಡುವುದು. ನಾನೇನು ಕೇಳುತ್ತೇನೆ. ಇದು ಇವತ್ತು ಪ್ರಸ್ತಾಪ ಮಾಡುತ್ತಿರುವಂತಹ ವಿಷಯವಲ್ಲ. ಈ ಮನೆಯಲ್ಲಿ ಒಂದೇ ಆಡಳಿತ ಪಕ್ಷದ ಶಾಸಕರು ಇಲ್ಲಿ ಧರಣಿ ಕುಳಿತಿದ್ದನ್ನು ನಾವು ನೋಡಿದ್ದೇವೆ. ಅವರ ಸರ್ಕಾರ ವಿರುದ್ಧವೇ ಅವಿಶ್ವಾಸ ನಿರ್ಣಯ ಮಂಡನೆ ಮಾಡುವ ದಿಕ್ಕಿನಲ್ಲಿ 30-40 ಜನ ಬಂದು ಕುಳಿತು ಸಭಾ-ನಾಯಕರ ಮಾತು ಕೇಳದೇ ಸಭಾಧ್ಯಕ್ಷರ ಮಾತು ಕೇಳದೆ ಧರಣಿ ಕುಳಿತಿದ್ದು ಇದೇ ಜನ ಮಾಡಲಿಲ್ಲವೇ ಸ್ವಾಮಿ? ಉಪದೇಶ ಮಾಡುವುದು ಬಹಳ ಸುಲಭ ಸ್ವಾಮಿ. ಇವತ್ತು ಗಂಭೀರವಾದಂತಹ ವಿಷಯ, ದಾಖಲೆಗಳೊಂದಿಗೆ ಸಿಕ್ಕಿರಬೇಕಾದರೆ ಒಬ್ಬ ಅಧಿಕಾರಿ ನಮ್ಮ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಈ ರೀತಿ ಒಂದು ಆದೇಶವನ್ನು ಹೊರಡಿಸಿರುವಂತಹ, ಸುತ್ತೋಲೆಯನ್ನು ಕಳುಹಿಸಿರುವಂಥದ್ದು ತಲೆ ತಗ್ಗಿಸುವ ಘಟನೆ ಇದು. ನನ್ನ ಕಛೇರಿಯಿಂದ ಮಂತ್ರಿ ಕಛೇರಿಯಿಂದ ಯಾವುದೇ ಸೂಚನೆ ಬಂದರೆ ನೀವು ಪರಿಪಾಲನೆ ಮಾಡಬಾರದು ಎನ್ನುವ ಮಟ್ಟಕ್ಕೆ ಒಂದು ರೀತಿ ವ್ಯವಹಾರಗಳು ನಡೆಯುತ್ತಿದೆ. ಇದು ದಿಗ್ಭ್ರಮೆ ತರುವಂತಹ ಸಂಗತಿ. ದಾಖಲೆ ಸಿಕ್ಕಿದೆ. ಸಭಾ-ನಾಯಕರು ಹೇಳಿದರು ಸುದೀರ್ಘವಾಗಿ ಚರ್ಚೆ ಮಾಡೋಣ ಎಂದು, ಸುದೀರ್ಘ ಅಲ್ಲ, ಸೀಮಿತವಾಗಿರುವಂತಹ ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಚಿವರನ್ನು ಕ್ಯಾಬಿನೆಟಿನಿಂದ ಬಿಟ್ಟು ಎರಡೂ ಸದನದ ಒಂದು ಸಮಿತಿ ರಚನೆ ಮಾಡಿ ಎಂದು ಹೇಳಿದ್ದೇವೆ. ಅವರು ಸ್ಟೇಟಮೆಂಟ್ ಏನು ಮಾಡುತ್ತಾರೆಂದು ನೋಡಿಕೊಂಡು ನಾವು ಬರುತ್ತೇವೆ. ಕಾರ್ಯಕಲಾಪ ಮುಂದುವರಿಸಿ ನಾವು ಸಭಾತ್ಯಾಗ ಮಾಡಿ ಹೊರಗಡೆ ಹೋಗುತ್ತೇವೆ. ನಾವು ಅವರ ಸ್ಟೇಟಮೆಂಟ್ ಕೇಳಲೂ ರೆಡಿ ಇಲ್ಲ. ಏಕೆಂದರೆ ಅವರು ಆ ರೀತಿ ನಿಷ್ಪೂರವಾಗಿ ಒಂದು ಸ್ಟೇಟಮೆಂಟ್ ಮಾಡುವುದರಲ್ಲಿ ವಿಶ್ವಾಸ ಇಲ್ಲ. ನೀವು ಕಾರ್ಯಕಲಾಪ ನಡೆಸಿ. ಅವರ ಸ್ಟೇಟಮೆಂಟ್ ನೋಡಿಕೊಂಡು ಮತ್ತೆ ಮೆಲನಲ್ಲಿ ಕುಳಿತುಕೊಳ್ಳಬೇಕೋ ಹೊರಗೆ ಇರಬೇಕೋ ನಾವು ತೀರ್ಮಾನ ಮಾಡುತ್ತೇವೆ.

(ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಬಿಜೆಪಿ ಸದಸ್ಯರೊಂದಿಗೆ ಸಭಾತ್ಯಾಗ ಮಾಡಿದರು)

. ಶ್ರೀ ಜೆ.ಎಚ್. ಪಟೇಲ್ : ಕರ್ನಾಟಕ ಬಿಟ್ಟು ಹೋಗಬೇಡಿ ಮತ್ತೆ ವಾಪಸ್ ಬನ್ನಿ.

(ಗೊಂದಲ)

+ ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿ ಪಡೆದು ಒಂದು ವಿಷಯ ಪ್ರಸ್ತಾಪ ಮಾಡಬೇಕು ಎಂದು ಮನಸ್ಸು ಇದೆ. ತಾವು ಅನುಮತಿ ಕೊಟ್ಟರೆ ಮಾತನಾಡುತ್ತೇನೆ.

ಅಧ್ಯಕ್ಷರು : ನೀವು ಯಾರು ಏನು ಬೇಕಾದರೂ ಮಾತನಾಡಿ. ರೂಲಿಂಗ್ ಕೊಡುವ ಸ್ಥಿತಿಗೆ ನನ್ನನ್ನು ತೆಗೆದುಕೊಂಡು ಹೋಗಬೇಡಿ-ಅಷ್ಟೆ.

ಶ್ರೀ ಮಾಲಾಳ್ ನಾಗರಾಜ್ : ಬಹಳ ಹೊತ್ತಿನ ನಂತರ ಮಾತನಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಇಷ್ಟೇ ವಿಷಯ, ವಿಷಯ ಗಹನವಾಗಿರತಕ್ಕದ್ದು. ದಾಖಲೆಗಳ ಆಧಾರದ ಮೇಲೆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಉತ್ತರ ಕೊಡತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯ ಇದು ಪ್ರಶ್ನೆ ಇದೆ. ನಾನು ಅಧ್ಯಕ್ಷರನ್ನು ಅಭಿನಂದಿಸಬೇಕು. ಸಹಜವಾಗಿ ವಿಷಯದ ಪ್ರಸ್ತಾಪ ಆದ ಕೂಡಲೇ ಅದು ಸದನದ ಸ್ವತ್ತು ಆಗುತ್ತದೆ. ಇವತ್ತು ಪ್ರಶ್ನೆ ಕೇಳಿದರೆ ಉತ್ತರ ಹೇಳುವುದು ಸರ್ಕಾರ ಆದರೂ ಕೂಡ ಕೇಳಿದವರ ಸ್ವತ್ತು ಉತ್ತರ ಆಗುವುದಿಲ್ಲ. ಪ್ರಶ್ನೆ ಹೇಗೆ ಸದನದ ಸ್ವತ್ತು ಆಗುತ್ತದೇಯೋ ಹಾಗೆಯೇ ಉತ್ತರ ಕೂಡ ಈ ಸದನದ ಸ್ವತ್ತು ಆಗುತ್ತದೆ. ರಾಜ್ಯದ ಜನತೆಗೆ ಎಲ್ಲಾ ಗೊತ್ತಾಗುತ್ತದೆ. ಅದೇ ಒಂದು ನಿಯಮಾವಳಿಯನ್ನು ನಾವೆಲ್ಲಾ ಪಾಲನೆ ಮಾಡಿಕೊಂಡು ಬಂದಿದ್ದೇವೆ. ಕೇಳಿರತಕ್ಕಂತಹವರು ಮಲ್ಲಿಕಾರ್ಜುನ ಖರ್ಗೆಯವರು ಅಥವಾ ಕಾಂಗ್ರೆಸ್ (ಐ) ಪಕ್ಷದ ಮಿತ್ರರು. ಅದನ್ನು ಸದುಪಯೋಗಪಡಿಸಿಕೊಂಡು ವಿರೋಧ ಪಕ್ಷದ ನಾಯಕರು ಮತ್ತು ಬೇರೆಯವರು ಕೇಳುವಂಥ ಹಕ್ಕು ಅವರಿಗೆ ಇದ್ದೇ ಇರುತ್ತದೆ. ಅದಕ್ಕಾಗಿ ಅವರು ಪ್ರಸ್ತಾಪ ಮಾಡಲು ಎದ್ದಾಗ ಅವರಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅವರೇ ಹೇಳಿದಂತೆ ನಮ್ಮದು ಅಧಿಕೃತ ವಿರೋಧ ಪಕ್ಷವಾಗಿರುವುದರಿಂದ ನಾವು ನಿಮ್ಮ ಮಾತುಗಳನ್ನು ಕೇಳಬೇಕಾಗಿಲ್ಲವೆಂದು ಪದೇ ಪದೇ ಹೇಳುತ್ತಿದ್ದಾರೆ. ದುರ್ದೈವವೋ, ಸುದೈವವೋ ನನಗೆ ಗೊತ್ತಿಲ್ಲ ಅದು ನಿಜವಾಗಿಯೂ ಅಧಿಕೃತ ವಿರೋಧ ಪಕ್ಷವಾಗಿದೆ. ನಾನು ಅದರ ಬಗ್ಗೆ ವ್ಯಾಖ್ಯಾನ ಮಾಡುವುದಿಲ್ಲ. ತಾವು ಅವರಿಗೆ ಅಧಿಕೃತ ವಿರೋಧ ಪಕ್ಷವೆಂದು ಮಾನ್ಯತೆ ಕೊಟ್ಟಿರುವುದರಿಂದ ನಾವು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅವರು ಹಾಗೆ ಹೇಳದಿದ್ದರೂ ತಾವು ಅವರಿಗೆ ಅಧಿಕೃತ ವಿರೋಧ ಪಕ್ಷವೆಂದು ಮಾನ್ಯತೆ ಕೊಟ್ಟಿದ್ದೀರೆಂದು ತಿಳಿದುಕೊಂಡು ನಾವು ಇಲ್ಲಿಯವರೆಗೆ ಸುಮ್ಮನಿದ್ದೇವೆ. ಅದು ವಿರೋಧ ಪಕ್ಷ ಹೌದು. ಅಲ್ಲವೆಂದು ಯಾರೂ ಕೂಡ ಹೇಳುವುದಕ್ಕೆ ಹೋಗಿರಲಿಲ್ಲ. ಬಿ.ಜೆ.ಪಿ ಬಗ್ಗೆ ನಾವು ಯಾರೂ ಕೂಡ ಮಾತನಾಡುವುದಕ್ಕೆ ಹೋಗಿಲ್ಲ. ವಿಷಯದ ಬಗ್ಗೆ ಪ್ರಸ್ತಾಪವಾದಾಗ 'ಸಮಗ್ರವಾಗಿ ಎಲ್ಲಾ ವಿಚಾರಗಳನ್ನೂ ಕೂಡ ಚರ್ಚೆಗೆ ತೆಗೆದುಕೊಳ್ಳೋಣ' ವೆಂದು ಮಾನ್ಯ ಮುಖ್ಯಮಂತ್ರಿಯವರೂ ಕೂಡ ಒಂದು ಅಭಿಪ್ರಾಯ ಪಟ್ಟರು. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜರವರು ಕೂಡ ನಿಸರ್ಗ ಸಂಪತ್ತು ಲೂಟಿಯಾಗುತ್ತಿದೆಯೆಂದು ಹೇಳಿದರು. ಈ ವಿಚಾರ ನನ್ನ ಸರ್ಕಾರವಿದ್ದಾಗ ಲಾಗಾಯ್ತಿನಿಂದ, ಮೊದಲಿನಿಂದಲೂ ಕೂಡ ಪ್ರಸ್ತಾಪವಾಗುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಮಾತನಾಡುತ್ತಾ ಈ ವಿಚಾರದಲ್ಲಿ ಸಮಗ್ರವಾಗಿ ಚರ್ಚೆಯಾಗಬೇಕೆಂಬ ಮಾತನ್ನು ಹೇಳಿದರು. ಆಗ ಮುಖ್ಯಮಂತ್ರಿಯವರು 'ಅದರ ಬಗ್ಗೆ ಚರ್ಚೆಯಾಗಲಿ, ನಮ್ಮದೇನೂ ಅಭ್ಯಂತರವಿಲ್ಲ' ವೆನ್ನುವ ಮಾತನ್ನು ತಾವು ಹೇಳಿದ್ದೀರೆಂದು ನನ್ನ ಭಾವನೆ. ಅಷ್ಟಾದರೂ ಕೂಡ ಕಾಂಗ್ರೆಸ್(ಐ) ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ಮಿತ್ರರಿಗೆ ಮಾತನಾಡಲು ಹಕ್ಕಿದೆ. ಏಕೆಂದರೆ, ಈ ವಿಷಯದ ಚರ್ಚೆ ಯಾವಾಗ ಪ್ರಸ್ತಾಪವಾಯಿತೋ ಅವರಿಗೂ ಕೂಡ ಗೊತ್ತಾಗಿಲ್ಲ. ಅದಕ್ಕಿಂತ ಮೊದಲು ಅಧಿಸೂಚನೆ, ಇತ್ಯಾದಿ ಅವರು ಕಳುಹಿಸಿಕೊಟ್ಟಿದ್ದಾರೆಂದು ಹಾಗೂ ಅದರಲ್ಲಿ ನಕಲಿ ಪರ್ಮಿಟಗಳನ್ನು ಕೊಟ್ಟಿರುವ ಪಟ್ಟಿಯನ್ನು ಏನು ಪ್ರಸ್ತಾಪಿಸುತ್ತಿದ್ದಾರೆ, ಇದಕ್ಕೆ ಮೊದಲೇ ಉತ್ತರ ಕೊಡಲಿ ಎಂದು ಕೇಳುವುದನ್ನು ನಾನು ತಪ್ಪೆಂದು ಹೇಳುತ್ತಿಲ್ಲ. ಅದು ಅವರಿಗೆ ಬಿಟ್ಟಿರುವ ವಿಷಯವಾಗಿದೆ. ಉತ್ತರವನ್ನು ತಾವು ಮುಂಚಿತವಾಗಿಯೇ ಕೊಡಬಹುದು. ತಾವು ಈಗ ಹೇಳಿದ್ದನ್ನು ನಾವು ಕುಳಿತುಕೊಂಡು ಕೇಳಿದ್ದೇವೆ. 'ಬೇಕಾದರೆ ನಾಳೆಯೇ

ಚರ್ಚೆಯಾಗಲಿ' ಎನ್ನುವ ಅಭಿಪ್ರಾಯವನ್ನು ತಾವು ಕೊಟ್ಟಿದ್ದೀರಿ. ಅದು ತಮಗೆ ಮತ್ತು ಪ್ರಸ್ತಾಪಿಸಿರತಕ್ಕ ಇತರ ಮಾನ್ಯ ಸದಸ್ಯ ಮಿತ್ರರಿಗೆ ಅಂತಿಮವಾಗಿ ಮಾನ್ಯ ಸಭಾಧ್ಯಕ್ಷರಿಗೆ ಬಿಟ್ಟಿರುವ ವಿಚಾರವಾಗಿದೆ. ಈ ಮಧ್ಯೆ 2-3 ದಿವಸಗಳ ಕಾಲ ನಡೆದಿರುವ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಯಾರು ಇದರ ಬಗ್ಗೆ ಮಧ್ಯಸ್ತಿಕೆ ವಹಿಸಿ ಮಾತನಾಡುತ್ತಿದ್ದಾರೋ

ಶ್ರೀ ವಾಟಾಳ್ ನಾಗರಾಜ್ : ಆ ಕಡೆಯನ್ನು ಈಗ ಇಲ್ಲಿ ಬಹಿರಂಗಪಡಿಸುವುದು ಬೇಡ.

ಅಧ್ಯಕ್ಷರು : ಅದೇನು ಕಡೆಯೆಂದು ನಮಗೆ ಗೊತ್ತಾಗಿಲ್ಲ

ಶ್ರೀ ಬಂಗಾರಪ್ಪ : ಅದು ಯಾವಾಗ? ಏನು? ಎಲ್ಲಿ ಎಂದು ವಾಟಾಳ್ ನಾಗರಾಜರವರು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ಈ ಸದನದಲ್ಲಿ ಹೇಳುವಂಥ ಕಥೆಯಲ್ಲ. ನಾನು ಆಗಲೇ ಮಾನ್ಯ ಬಂಗಾರಪ್ಪನವರಿಗೆ ಹೇಳಿದೆ, ಈ ಬಗ್ಗೆ ಕನಿಷ್ಟ ಏನೇನಾಯಿತು ಎಂದು ಕೇಳುವುದಕ್ಕಾದರೂ ನೀವೇ ಒಂದು ಸಭೆಯನ್ನು ಬೇರೆ ಕಡೆ ಕರೆಯಿರಿ, ಸಭೆಗೆ ಮುಖ್ಯಮಂತ್ರಿಗಳನ್ನು ಒಳಗೊಂಡಂತೆ ಎಲ್ಲಾ ಮುಖಂಡರನ್ನೂ ಕರೆದು ನಾನು ಅಲ್ಲಿಯೇ ನಿಮಗೆ ವಿವರ ಹೇಳುತ್ತೇನೆ. ಆಗ ನನ್ನ ಪರಿಸ್ಥಿತಿ ತಿಳಿದುಕೊಂಡು ನನ್ನ ಬಗ್ಗೆ ಕರುಣೆ, ಕನಿಕರ ಬರುತ್ತದೆಯೋ ಏನೋ ಎಂದು. ನಮ್ಮ ಮೇಲೆ ಯಾವ್ಯಾವ ಪದಗಳ ಪ್ರಯೋಗ ನಡೆದಿದೆ ಎಂಬುದನ್ನು ಈಗ ಮಾತನಾಡುವುದು ಬೇಡ, ಅನಂತರ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಯಾರ ಬಗ್ಗೆ ಎಂದು ಸ್ವಲ್ಪ ಹೇಳಿದರೆ ಸಾಕು. ಅಷ್ಟೇ ಬೇಕಾಗಿರುವುದು.

ಶ್ರೀ ವಾಟಾಳ್ ನಾಗರಾಜ್ : ನೀರಸ ಸುದ್ದಿ ಹೊರಗೆ ಬರುವುದು ಬೇಡ.

ಶ್ರೀ ಎಸ್. ಬಂಗಾರಪ್ಪ : ಈಗ ಮತ್ತೊಂದು ವಿಚಾರ ಪ್ರಸ್ತಾಪವಾಗುವುದು ಬೇಡ. ಏಕೆಂದರೆ, ಉದ್ಭವಿಸಿದ್ದ ಸಮಸ್ಯೆ ಶಾಂತಿಯುತವಾಗಿ ಮುಕ್ತಾಯವಾದಾಗ ಮತ್ತೆ ಅದನ್ನೇ ಕೆಣಕತಕ್ಕ ಆಸೆ ನಮಗೆ ಯಾರಿಗೂ ಕೂಡ ಇಲ್ಲ. ತಮ್ಮ ಅಪ್ಪಣೆ ಪಡೆದು ಒಂದು ವಿಚಾರ ಪ್ರಸ್ತಾಪ ಮಾಡಬೇಕೆಂದು ಎದ್ದು ನಿಂತಿದ್ದೇನೆ. ವಿಷಯದ ಪ್ರಸ್ತಾಪವನ್ನು ಇತ್ತ ಕಡೆಯಿಂದ ಕಾಂಗ್ರೆಸ್(ಐ) ಪಕ್ಷದ ಮಿತ್ರರು ಮಾಡಿದರೆ ಉತ್ತರ ಕೊಡಬೇಕಾದ್ದು ಸರ್ಕಾರ. ಆದರೆ, ಎಲ್ಲಾ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳೂ ಸಹ ತಮ್ಮ ಅಪ್ಪಣೆ ಪಡೆದು ಕೇಳಬಹುದು. ಅಲ್ಲದೆ, ಮಾನ್ಯ ವಿರೋಧಿ ಪಕ್ಷ ನಾಯಕರು ಕೂಡ ಕೇಳಿದ್ದಾರೆ. ಉತ್ತರ ಕೊಡಿಸುವುದಾಗಿ ತಾವೇ ಅಪ್ಪಣೆ ಕೊಡಿಡಸಿದಂತೆ, ಅವರು ಉತ್ತರಕ್ಕೂ ಕೂಡ ಕಾಯದೆ ತತಕ್ಷಣ ಧರಣಿ ಹೂಡುವುದೇ? ನನ್ನ 30 ವರ್ಷಗಳ ರಾಜಕೀಯ ಜೀವನದ ಇತಿಹಾಸದಲ್ಲಿ ಹಾಗೆ ಧರಣಿ ಹೂಡಲು ಧಡಕ್ಕನೆ ಹೋಗಿ ನೆಲಕಚ್ಚಿ ಕುಳಿತುಕೊಳ್ಳುವುದನ್ನು ನಾನು ಎಲ್ಲಿಯೂ ನೋಡಿಲ್ಲ, ಕಂಡಿಲ್ಲ. ಏನ್ಸೋ ಧರಣಿ ಕುಳಿತುಕೊಂಡು ಬಿಟ್ಟರು. ಏಕೆ ನಾವು ಧರಣಿ ಕುಳಿತುಕೊಂಡಿದ್ದೇವೆಂದು ಅವರಿಗೂ ಗೊತ್ತಿಲ್ಲ, ನಮಗೂ ಗೊತ್ತಿಲ್ಲ. ಮೇಲ್ಮನೆಯಲ್ಲಿ ಕಾಂಗ್ರೆಸ್ (ಐ) ಪಕ್ಷದ ಮಿತ್ರರು ಧರಣಿ ಕುಳಿತುಕೊಂಡರೆಂದು ಬಿ.ಜೆ.ಪಿ.ಯವರೂ ಕೂಡ ಕುಳಿತುಕೊಳ್ಳಬೇಕೆಂದು ಅವರೇನಾದರೂ ಕಾನೂನು ಬರೆದಿಟ್ಟುಕೊಂಡಿದ್ದಾರೆಯೇ?

ಶ್ರೀ ಎಸ್.ಆರ್. ಲಕ್ಷ್ಮಯ್ಯ : ವಿನಾಶಕಾಲೇ ವಿಪರೀತ ಬುದ್ಧಿಯೆಂದು ಶನಿ ಅವರ ಹೆಗಲೇರಿಬಿಟ್ಟಿದ್ದಾನೆ. ಅವರಿಗೆ ಅವಸಾನ ಕಾಲ ಸನ್ನಿಹಿತವಾದಂತಿದೆ. ನಮ್ಮಲ್ಲಿ ಒಂದು ದೇವರು ಇದೆ, ತಾವು ಅಪ್ಪಣೆ ಕೊಟ್ಟರೆ ಮಂತ್ರಿಸಿಕೊಂಡು ಬಂದು ನಾನು ಅವರಿಗೆ ಅದನ್ನು ಕೊಡುತ್ತೇನೆ. ಹಾಗೆಯೇ ವಿರೋಧ ಪಕ್ಷದ ನಾಯಕರಿಗೆ ಸೋಂಕಿಸಿದರೆ ಸರಿಹೋಗಬಹುದು.

ಅಧ್ಯಕ್ಷರು : ತಾವು ಹಾಗೆಲ್ಲಾ ಮಾತನಾಡಬಾರದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಇದುವರೆವಿಗೂ ಲಕ್ಷ್ಮಯ್ಯನವರು ಇರಲಿಲ್ಲವಾದ್ದರಿಂದ ಶಾಂತವಾಗಿತ್ತು. ಈಗ ಅವರು ಬಂದು ಪ್ರಸ್ತಾಪಿಸುತ್ತಿದ್ದಂತೆ ಮತ್ತೆ ಪರಿಸ್ಥಿತಿ ಎತ್ತೆತ್ತಲೋ ಹೋಗುವಂತೆ ಕಾಣುತ್ತಿದೆ.

ಅಧ್ಯಕ್ಷರು : ಅವರು ಮೂರು ದಿವಸಗಳಿಂದ ಸದನಕ್ಕೆ ಬಂದಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ : ಆದುದರಿಂದ, ಈ ಸಂದರ್ಭದಲ್ಲಿ ತತ್‌ಕ್ಷಣ ಬಿ.ಜೆ.ಪಿ. ಮಿತ್ರರು ಧರಣಿ ಕುಳಿತುಕೊಂಡರು. ಹೋಗಲಿ, ಧರಣಿ ಕುಳಿತುಕೊಂಡಿದ್ದು ಸರಿ ಎಂದು ಅದರ ಬಗ್ಗೆ ತಮ್ಮ ಉತ್ತರ ಏನೆಂದು ನಿರೀಕ್ಷಿಸಿ ಕೇಳುವಷ್ಟು ಸೌಜನ್ಯವಿಲ್ಲವೇ? ಅಂದರೆ, ಇವರು ಧರಣಿ ಕುಳಿತುಕೊಳ್ಳಲಿ ಅಂತಲೇ ಜನರು ಇವರಿಗೆ ಮತ ಕೊಟ್ಟು ಕಳುಹಿಸಿದ್ದಾರೆಯೇ? ತಾವೇ ಹೇಳಿದ್ದೀರಿ. ತಮ್ಮನ್ನು ಜನರು ಜವಾಬ್ದಾರಿಯಿಂದ ಆರಿಸಿ ಸದನದೊಳಗೆ ಕಳುಹಿಸಿ ಕೊಟ್ಟಿದ್ದಾರೆ, ತಾವು ತಮ್ಮ ಕರ್ತವ್ಯ ನಿರ್ವಹಿಸುವುದಕ್ಕೆ ವಿಧಿ-ವಿಧಾನಗಳಿಲ್ಲವೂ ಇದೆ' ಎಂಬ ಮಾತನ್ನು ಸೂಕ್ಷ್ಮವಾಗಿ ಹೇಳಿದ್ದೀರಿ. ಈ ಸೂಕ್ಷ್ಮತೆಯ ಅರಿವಿನ ಪರಿಸರಕ್ಕೆ ಅವರು ಒಳಪಡಲಾರರು ಎಂಬ ಭಾವನೆ ನಮಗೆಲ್ಲರಿಗೂ ಬರುತ್ತಿದೆ. ಸೂಕ್ಷ್ಮ ಪರಿಸರದ ಕಕ್ಷೆಯೊಳಗಡೆ ಅವರು ಬರುವುದಕ್ಕೆ ಸಾಧ್ಯವಾಗದು ಎನ್ನುವ ಭಾವನೆ. ಅವರು ಧರಣಿ ಕುಳಿತುಕೊಂಡಿದ್ದು ಸರಿಯೇ? ತಪ್ಪೇ? ಅದು ಪ್ರತ್ಯೇಕ ವಿಚಾರ. ಆದರೆ, ಮತ್ತೆ ಅವರು ಎದ್ದು ಸಭಾತ್ಯಾಗ ಮಾಡವುದೇ?

ಅಧ್ಯಕ್ಷರು : ನೀವು ಆಗಲೇ ಹೊರಟುಹೊಗುತ್ತೇನೆಂದು ಹೇಳಿದಿರಿ. ಅದಕ್ಕೋಸ್ಕರ ನೀವು ವಾಟಾಳ್ ನಾಗರಾಜರವರ ತರಹ ಇನ್ನು ಮುಂದೆ ಬೆಳಿಗ್ಗೆ ಸದನಕ್ಕೆ ಬಂದರೆ ಸಂಜೆಯವರೆಗೂ ಇದ್ದುಬಿಡಬೇಕು.

ಶ್ರೀ ಎಸ್. ಬಂಗಾರಪ್ಪ : ನಿಜ ಹೇಳಬೇಕೆಂದರೆ, ನಾನು ಮಿಸ್ ಮಾಡಿಕೊಂಡು ಬಿಡುತ್ತಿದ್ದೆ. ಸದನದಲ್ಲಿ ಧರಣಿ ಕುಳಿತುಕೊಳ್ಳುವುದು ಅವರ ಹಕ್ಕಾಗಿರಬಹುದು. ಧರಣಿ ಕುಳಿತುಕೊಳ್ಳುವುದು ಯಾವಾಗ? ಏನು? ಎಂಬುದಕ್ಕೆ ಸಂದರ್ಭ, ಸನ್ನಿವೇಶ ಇರುತ್ತದಲ್ಲವೇ? ಎಲ್ಲ ಪಕ್ಷದವರೂ ಕೂಡ ಧರಣಿ ಕುಳಿತುಕೊಂಡಿರುವ ಸಂದರ್ಭಗಳಿವೆ. ಆದರೆ, ಈ ರೀತಿ ಈಗ ಸದನದಲ್ಲಿ ಧರಣಿ ಕುಳಿತುಕೊಂಡಿರುವುದು ಬಿ.ಜೆ.ಪಿ. ಪಕ್ಷದವರನ್ನು ಬಿಟ್ಟರೆ ಬೇರೆ ಯಾವ ಪಕ್ಷವನ್ನೂ ನಾನು ನೋಡಿಲ್ಲ. ಇವರು (ಬಿಜೆಪಿ) ಕುಳಿತುಕೊಳ್ಳುವುದು ಮತ್ತೆ ಎದ್ದು ಹೋಗುವುದು. ಧರಣಿ ಕುಳಿತುಕೊಂಡರೆ ಒಂದು ಸಾರಿ ನೆಲ ಕಚ್ಚಿಕೊಳ್ಳಬೇಕು, ಮ್ಯಾನ್‌ಹೋಲ್ಡರ್ ಆಗಬೇಕು. ಆದರೆ, ಎಂತಹುದೂ ಇಲ್ಲ. ನೆಲ

ಕಚ್ಚಿಕೊಳ್ಳುತ್ತಾರೆ ಮತ್ತೆ ಎದ್ದು ಹೋಗುತ್ತಾರೆ. ಅದೇನೇ ಇರಲಿ. ಮತ್ತೆ ವ್ಯಾಖ್ಯಾನ ಮಾಡುವುದು ಅರ್ಥಹೀನ. ಅದೇನೆಂದು ನನಗೆ ಗೊತ್ತಾಗಿದೆ. ಅವರು ಏತಕ್ಕಾಗಿ ಸಭಾತ್ಯಾಗ ಮಾಡಿದರೆಂಬುದು ಎಲ್ಲರಿಗೂ ವೇದ್ಯವಾಗಿರುವ ವಿಷಯವಾಗಿರುವುದರಿಂದ ಮತ್ತೆ ನಾನು ಹೇಳಲು ಹೋಗುವುದಿಲ್ಲ. ಆದರೆ ಕಾಂಗ್ರೆಸ್ (ಐ) ಮುಖಂಡರಾದ ಮಲ್ಲಿಕಾರ್ಜುನ ಖರ್ಗೆಯವರು ಬಹಳ ಪ್ರಾಮುಖ್ಯವಾದ ವಿಷಯವನ್ನು ಪ್ರಸ್ತಾಪಿಸಿದಾಗ ರಾಜಕೀಯ ದುರ್ಲಾಭ ಮಾಡಿಕೊಳ್ಳುವುದಕ್ಕೋಸ್ಕರ ಮತ್ತೊಬ್ಬರು ಅದನ್ನು ಸದುಪಯೋಗಪಡಿಸಿಕೊಂಡರೆ ಯಾವ ಜನರಿಗೆ ಇವೊತ್ತು ಪತ್ರಿಕೆಗಳು ಇತ್ಯಾದಿ ಮಾಧ್ಯಮಗಳ ಮುಖಾಂತರ ಉತ್ತರ ಸಿಗಬೇಕಾಗಿತ್ತೋ ಅದಕ್ಕೆ ಧಕ್ಕೆ ಯಾಗುತ್ತದೆಂಬ ಮಾತನ್ನು ಹೇಳುತ್ತಾ, ಇದು ಬಿ.ಜೆ.ಪಿ. ವತಿಯಿಂದಲೇ ನಡೆಯುತ್ತಿದೆ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಅದುದರಿಂದ, ಈಗ ಅವರಿಗೆ ತಿಳಿವಳಿಕೆ ಕೊಡುವಂಥ ಶಕ್ತಿ ಈ ಸದನಕ್ಕೆ ಇದೆಯೋ ಇಲ್ಲಮೋ ನನಗಂತೂ ಗೊತ್ತಿಲ್ಲ. ಏಕೆಂದರೆ, ಅವರಿಗೆ ಅವಕಾಶ ಕೊಟ್ಟಿದ್ದೂ ಆಯಿತು, ನೋಡಿದ್ದೂ ಆಯಿತು. ಈಗಾಗಲೇ ಉದ್ಭವಿಸಿದ್ದ ಸಮಸ್ಯೆಯನ್ನು ಇಮ್ಮೊತ್ತು ಬಗೆಹರಿಸಿದ್ದು, ಮತ್ತೊಂದು ಸಮಸ್ಯೆ ಉದ್ಭವಿಸುವುದು ಬೇಡ. ವಿರೋಧ ಪಕ್ಷದ ನಾಯಕರಿಗೆ ನಾವು ಹತ್ತು ಸಾರಿ ಹೇಳಿದ್ದೇವೆ, ಜೊತೆಗೆ ಕಾಂಗ್ರೆಸ್(ಐ) ಪಕ್ಷದ ಮಿತ್ರರು ಕೂಡ ಹೇಳಿದರು. ಏನು ಹೇಳಿದ್ದೇವೆಂದರೆ, 'ವಿರೋಧ ಪಕ್ಷದ ನಾಯಕರು ಸರ್ಕಾರದ ಮಂತ್ರಿಮಂಡಲದ ವಿರುದ್ಧ ಸದನದಲ್ಲಿ ಅವಿಶ್ವಾಸ ನಿರ್ಣಯ ತಂದಾಗ ಅವರೊಬ್ಬರೇ ಬಿ.ಜೆ.ಪಿ. ನಾಯಕರಾಗುವುದಿಲ್ಲ, ಎಲ್ಲಾ ಪಕ್ಷಗಳಿಗೂ ಕೂಡ ವಿರೋಧ ಪಕ್ಷದ ನಾಯಕರಾಗುತ್ತಾರೆ. ಎಂದರೆ ವಾಟಾಳ್ ನಾಗರಾಜರವರು ಅದಕ್ಕೆ' ನೀವೇಕೆ ಈ ಕೆಲಸ ಮಾಡುತ್ತಿದ್ದೀರಿ? ಎಂದರು. ಧರಣಿ ಕುಳಿತುಕೊಳ್ಳಬೇಕೆನ್ನುವ ಅಭಿಪ್ರಾಯ ವ್ಯಕ್ತಪಡಿಸಿದಾಗ, ವಿಷಯ ಸೂಕ್ತವಾಗಿದ್ದರೆ, ನಾವು ಸಹ ಧರಣಿ ಕುಳಿತುಕೊಳ್ಳುತ್ತಿದ್ದೆವು. ಇನ್ನು ಸಭಾತ್ಯಾಗ ಮಾಡುವ ವಿಚಾರ ಅವರಿಗೆ ಗೊತ್ತಾಗಲಿಲ್ಲವಾದ್ದರಿಂದ ಪಾಪ ಅದಕ್ಕೆ ಅವರು ಏನೂ ಹೇಳುವುದಕ್ಕೆ ಆಗಲಿಲ್ಲ. ಹಾಗೆಯೇ ಕುಳಿತುಕೊಂಡು ನೋಡುತ್ತಿದ್ದಾರೆ. ನಿಮ್ಮ ಬಗ್ಗೆ ನಮಗೆ ಬಹಳ ದುಃಖವಿದೆ. ಏಕೆಂದರೆ, ಮೂರು ದಿವಸಗಳಿಂದ ಅವರು ಸುಸ್ತಾಗಿದ್ದಾರೆ. ನಿಮ್ಮ ನೋವು ನಮಗರ್ಥವಾಗುತ್ತದೆ. ಈ ಪರಿಸ್ಥಿತಿಗೆ ಅವರೂ ಕೂಡ ಹೊಂದಿಕೊಳ್ಳುವುದು ಭಾರಿ ಕಷ್ಟವಾಗಿದೆ. ಇಷ್ಟು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಕ್ಷಮಿಸಬೇಕು, ಈ ವಿಷಯ ಬಹಳ ಪ್ರಾಮುಖ್ಯವಾಗಿರುವುದರಿಂದ ಇದನ್ನು ರಾಜಕೀಯವಾಗಿ ಪ್ರಚಾರಕ್ಕೆ ಬಳಸಿಕೊಳ್ಳಲು ಭಾರತೀಯ ಜನತಾ ಪಕ್ಷದ ಮಿತ್ರರು ದುರುಪಯೋಗಪಡಿಸಿ ಕೊಳ್ಳೋಣ. ವಿಷಯ ಪ್ರಸ್ತಾಪವಾಗಿರುವುದರಿಂದ, ಸರ್ಕಾರದಿಂದ ಉತ್ತರ ಪಡೆದುಕೊಳ್ಳೋಣ, ರಾಜ್ಯದ ಜನರಿಗೆ ಗೊತ್ತಾಗಲಿ. ಮತ್ತು ವಿಷಯದ ಚರ್ಚೆಗೂ ತಾವು (ಅಧ್ಯಕ್ಷರು) ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಈ ವಿಷಯ ಆದಷ್ಟು ಶೀಘ್ರವಾಗಿ ಚರ್ಚೆಗೆ ಬರಲಿ. ನನ್ನ ಅರ್ಥವೇನೆಂದರೆ, ಬಿ.ಜೆ.ಪಿ.ಯವರು ಇದನ್ನು ರಾಜಕೀಯ ಮಾಡಿದ ಅವಶ್ಯಕತೆಯಂತೆ ದಯವಿಟ್ಟು ನಾವು ಯಾರೂ ಕೂಡ ರಾಜಕೀಯ ಮಾಡವುದು ಬೇಡ. ಅದು ಪ್ರಜಾಪ್ರಭುತ್ವಕ್ಕೆ ಸಲ್ಲುವ ಲಕ್ಷಣವಂತೂ ಅಲ್ಲವೆಂದು ಇಷ್ಟು ಮಾತ್ರ ಹೇಳಿ ತಮ್ಮನ್ನು ಅಭಿನಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನೋಡಿ ಎಂತಹ ಅವಕಾಶವನ್ನು ಬಂಗಾರಪ್ಪನವರು ಕಳೆದುಕೊಳ್ಳುತ್ತಿದ್ದರು ಎಂದರೆ, ಸುಮಾರು 45 ನಿಮಿಷದಿಂದ

ನನ್ನನ್ನು ಕಾಡುತ್ತಿದ್ದರು ನಾನು ಮನೆಗೆ ಹೋಗುತ್ತೇನೆ ಎಂದು. ನಾನು ಹೋಗಬೇಡಿ ಇರಿ ಎಂದು ಹೇಳಿದೆ. ಇಲ್ಲ, ನಾನು ಹೋಗಲೇ ಬೇಕು ನನಗೆ ಅರ್ಜೆಂಟ್ ಇದೆ ಎಂದು ಹೇಳಿತ್ತಿದ್ದರು. ಹೋಗಿದ್ದರೆ ಈ ಅವಕಾಶವನ್ನು ಅವರು ಕಳೆದುಕೊಳ್ಳುತ್ತಿದ್ದರು. ಇದು ಏನಾಗಿದೆ ಎಂದರೆ ಒಂದು ನಾನು ಏನು ತಿಳಿದುಕೊಂಡಿದ್ದೆ, ಇಷ್ಟು ಬೇಗ ಧರಣಿಗೆ ಬರುತ್ತಾರೆ ಎಂದು ನಾವು ಯಾರೂ ಅಂದುಕೊಂಡಿರಲಿಲ್ಲ. ಇದು ಇಷ್ಟು ಬೇಗ ನಮಗೆ ಆಶ್ಚರ್ಯವಾಗುತ್ತಿದೆ. ಇವತ್ತು ಈ ಗ್ರಾನೈಟ್ ವಿಚಾರ ಚರ್ಚೆಗಿಂದ ಹೆಚ್ಚಾಗಿ ಇವರ ಧರಣಿದ ಬಗ್ಗೆ ಚರ್ಚೆ ಮಾಡುವ ಪರಿಸ್ಥಿತಿ ನಮಗೆ ಉದ್ಭವವಾಯಿತು. ಇದು ಇಷ್ಟು ಬೇಗು ನಮಗೆ ಯಾರಿಗೂ ಗೊತ್ತಾಗಿಲಿಲ್ಲ. ಅವರು ಏನು ಹೇಳುತ್ತಾರೆ ಎಂದರೆ ಒಂದು ತರಹ ಸವತಿ ಮಕ್ಕಳ ತರಹ ನಮಗೆ ಕಾಣುತ್ತಿದ್ದಾರೆ. ವಿರೋಧ ಪಕ್ಷದ ನಾಯಕರು ಎಂದು ಹೇಳಿದರೆ ನಿಮಗೂ ಪ್ರೀತಿ ಮಮತೆ ಇದ್ದುದು ನಾನು ನೋಡಿದ್ದೇನೆ. ಅದು ಈಗ ಮಾತನಾಡುವುದು ಬೇಡ, ಏನೂ ಆಗಿಲ್ಲ ನಾನು ಚೆನ್ನಾಗಿ ಇರುವುದರಿಂದ ಈ ಸದನ ಚೆನ್ನಾಗಿ ಇದೆ. ನಮಗೂ ಅವರಿಗೂ ರಾಜೀಯೂ ಇಲ್ಲ, ನಮಗೂ ಅವರಿಗೂ ಜಿಜ್ಞಾಸೆನೂ ಇಲ್ಲ. ಪ್ರಶ್ನೆ ಏನು? ನಾನು ತಮಗೆ ಏನು ಹೇಳುತ್ತೇನೆಂದರೆ, ಅವರು ವಿರೋಧ ಪಕ್ಷದ ನಾಯಕರು 40 ಜನ ಇರುವುದರಿಂದ ಸ್ವಲ್ಪ ನಮ್ಮಹಣೆಬರಹ ನೆಟ್ಟಗಾಗಿದೆ. ಏಕೆಂದರೆ ತಾಂತ್ರಿಕವಾಗಿ ವಿರೋಧ ಪಕ್ಷದ ಮುಖಂಡತ್ವ ಅವರಿಗೆ ಸಿಕ್ಕಿದೆ. ಅದನ್ನೂ ಯಾರು ತಳ್ಳಿ ಹಾಕುವ ಹಾಗೆಯೇ ಇಲ್ಲ. ಆದರೆ ಅವರು ಏನು ತಿಳಿದುಕೊಂಡಿದ್ದಾರೆ ಎಂದರೆ ಇನ್ನು ನಾನು ಬಿ.ಜೆ.ಪಿ. ಮುಖಂಡ ಎಂದು ತಿಳಿದುಕೊಂಡಿದ್ದಾರೆಯೇ ಹೊರತು ಈ ವಿರೋಧ ಪಕ್ಷದ ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗಬೇಕೆಂದಬ ಭಾವನೆ ಅವರಲ್ಲಿ ಇಲ್ಲದೆ ಇರತಕ್ಕಂಥದ್ದು, ಅತ್ಯಂತ ನೋವಾಗಿದೆ. ನಾನು ಅವರಿಗೆ ಹತ್ತಾರು ಬಾರಿ ಈ ಮಾತನ್ನು ಹೇಳಿದ್ದೇನೆ. ನೀವು ಅನೇಕ ವಿಚಾರದಲ್ಲಿ ನಿಮ್ಮ ಜೊತೆಯಲ್ಲಿ ನಾವು ಬರದೆ ಇರುವಂತಹ ವಿಚಾರಗಳು ಇರಬಹುದು, ಆದರೆ ನಮ್ಮ ಜೊತೆ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬನ್ನಿ ಎಂದು. ಅವರು ಹೋಗುವಾಗ ಏನು ಹೇಳಿದರು ಎಂದರೆ ನಾವು ಕಾಂಗ್ರೆಸನವರು ಅಲ್ಲಿ ಧರಣಿ ಮಾಡುತ್ತಿದ್ದಾರೆ ನಾವು ಇಲ್ಲಿ ಧರಣಿಗೆ ಅವರಿಗಿಂತ ಮುಂಚೆ ಹೋಗಬೇಕೆಂಬ ಪ್ರಶ್ನೆ ಇಲ್ಲ. ಅವರಿಗೆ ಬೆಂಬಲ ಕೊಟ್ಟು ನಾವು ಹೋಗುತ್ತಿದ್ದೇವೆ, ನಮ್ಮ ಹಿಂದೆ ಅವರೂ ಬರುತ್ತಾರೆ ಎಂದು ಅಂದುಕೊಂಡಿರುವ ಭಾವನೆ ಅದು ಏನಾಗುತ್ತದೆ ಎಂದರೆ ಅದು ಒಂದು ರೀತಿ ಬೇರೆ ನಾಟಕೀಯವಾದ ಮಾತು. ಪ್ರಾಮಾಣಿಕತೆ ಇಲ್ಲ. ಆದರೆ ನಮಗೆ ಧರಣಿ ಮಾಡುವುದಕ್ಕೆ ಬರುವುದಿಲ್ಲ ಎಂದು ತಾವು ತಿಳಿದುಕೊಳ್ಳಬಾರದು. ನಮಗೆ ಧರಣಿ ಮಾಡುವುದಕ್ಕೆ ಬರುತ್ತದೆ, ಸಭಾತ್ಯಾಗ ಕೂಡ ಮಾಡುತ್ತೇವೆ. ಆದರೆ ಅವರು ಧರಣಿ ಮಾಡುವಾಗ ಒಂದು ಮಾತು ಹೇಳಿದರೆ ಎಂದರೆ ಅದು ಒಂದು ಅಮೂಲ್ಯವಾದ ತೀರ್ಪು ಎಂದು ತಿಳಿದುಕೊಳ್ಳಬೇಕು. ಎಂತಹ ಮಾತು ಹೇಳಿದಿರಿ ಎಂದರೆ ಯಾರೂ ಆ ಧರಣಿ ಮಾಡಿದವರಿಗೆ ಈ ಸಭೆ ನಡವಳಿಕೆಯ, ಸದನ ಯಾವ ರೀತಿ ಇರಬೇಕು, ಹೇಗೆ ನಡೆಸಿಕೊಂಡು ಹೋಗಬೇಕು ಎನ್ನುವ ಮಾತಿನಲ್ಲಿ ಇರುವ ಹಿನ್ನಲೆ ಇದು ಬಹಳ ಅತ್ಯಂತ ಬೆಲೆ ಕೊಡುತಕ್ಕಂತಹ ಮಾತುಗಳನ್ನು ತಾವು ಆಡಿದಿರಿ. ನಾನು ಒಪ್ಪುತ್ತೇನೆ. ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡಲೇಬೇಕೆಂದು ನಮ್ಮ ಒತ್ತಾಯ. ಆ ಹೇಳಿಕೆಯಲ್ಲಿ ನಮಗೆ ಸಮಂಜಸ ಉತ್ತರ ಬರಲಿಲ್ಲ ಎಂದು ಹೇಳಿದಾಗ ನಮ್ಮ ಬೇಡಿಕೆಯನ್ನು ಒಪ್ಪಲಿಲ್ಲ ಎಂದು ಹೇಳಿದಾಗ ಅಂತಿಮವಾಗಿ

ಸರ್ಕಾರದ ವಿರುದ್ಧ ಹೋಗತಕ್ಕಂತಹ ವಿಧಾನಗಳು ಧರಣಿ ಸಭಾತ್ಯಾಗ ಪ್ರತಿಭಟನೆ ಇದು. ಇನ್ನು ಅವರಿಂದ ಏನೂ ಬಂದಿಲ್ಲ, ಅಥವಾ ಅವರು ಹೇಳಬಹುದು, ನೀವು ಹೇಳಿದ್ದುದು ನಿಜ ಒಪ್ಪಿಕೊಂಡಿದ್ದೇವೆ, ತನಿಖೆ ಮಾಡುತ್ತೇವೆ. ಇದರ ಬಗ್ಗೆ ಇಂತಿಂಥವರನ್ನು ಅಮಾನತ್ತಿನಲ್ಲಿಟ್ಟಿದ್ದೇವೆ, ಇಂತಹ ಅನೇಕ ವಿಚಾರಗಳನ್ನು ಅವರಿಗೆ ಹೇಳಬಹುದು. ಏನೂ ಹೇಳತಕ್ಕಂತಹ ಕೇಳತಕ್ಕಂತಹ ಸೌಜನ್ಯ, ತಾಳ್ಮೆ ಎಲ್ಲವನ್ನೂ ಕಳೆದುಕೊಂಡು ಹೀಗೆ ಹೊರಗಡೆ ಹೋಗುವುದಾದರೆ, ಯಾವ ಸಮಸ್ಯೆಯನ್ನೂ ನಾವು ಜನಗಳ ಪರವಾಗಿ ಇಲ್ಲಿ ಪ್ರತಿಪಾದನೆ ಮಾಡುತ್ತಿದ್ದೇವೆ, ಅದಕ್ಕೆ ಅಪಚಾರ ಆಗುತ್ತದೆಯೇ ಹೊರತು ಅದಕ್ಕೆ ಏನು ಬೆಲೆ ಬರುತ್ತದೆ ಎಂದು ನಾನು ಅರಿದುಕೊಂಡಿಲ್ಲ. ನಾವು ಯಾವ ಜನರ ಪ್ರಶ್ನೆಯನ್ನು ಇಲ್ಲಿ ಎತ್ತಿ ಇಲ್ಲಿ ನಾವು ಯಾವುದೋ ಉದ್ದೇಶಕ್ಕೆ ಅದನ್ನು ತಿರುಗಿಸಿ ರಾಜಕಾರಣ ಮಾಡುವುದಾದರೆ ಅದು ಸಾಧ್ಯವಿಲ್ಲ. ಅದನ್ನು ನಾನು ನಿನ್ನೆಯೂ ಹೇಳಿದ್ದೇನೆ. ಎತೆಂತಹ ವಿರೋಧ ಪಕ್ಷದ ಮುಖಂಡರು ಈ ಸದನದಲ್ಲಿದ್ದರು. ತಾವು ನಮಗೆ ಸ್ವಲ್ಪ ಗಮನಕ್ಕೆ ತೆಗೆದುಕೊಂಡು ನೀವು ನಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಎಂದು ಹೇಳಿದರೆ ಇಲ್ಲ ನೀವೇ ಬೇರೆ ನಾವೇ ಬೇರೆ ಎಂದು ನಿರ್ಧಾರಕ್ಕೆ ಅವರು ಬರುವುದಾದರೆ ಅದು ನಿಜವಾಗಿ ಅತ್ಯಂತ ನೋವಿನ ಪ್ರಸಂಗ. ಅವರ ಹಣೆಬರಹ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಇದರಿಂದ ಮಾನ್ಯ ಅಧ್ಯಕ್ಷರೆ, ಈಗ ಮುಖ್ಯಮಂತ್ರಿಗಳು ಈ ಬಗ್ಗೆ ಏನು ಉತ್ತರ ಕೊಡುತ್ತಾರೆ, ನೋಡೋಣ ತಾವು ನಗುವುದ ನಮ್ಮ ಹಣೆಬರಹದ ಬಗ್ಗೆ ಎಂದು ಕಾಣುತ್ತದೆ. ಬೇಡ ಆ ವಿಚಾರ ನಾನು ಮತ್ತೆ ಪ್ರಸ್ತಾಪ ಮಾಡುವುದಿಲ್ಲ. ಏಕೆಂದರೆ ಅದು ನನಗೂ ಗೊತ್ತು, ನಿಮಗೂ ಗೊತ್ತು. ಕೆಲವು ಸ್ನೇಹಿತರಿಗೂ ಗೊತ್ತು. ಈ ಸದನದ ಹಕ್ಕು ಚ್ಯುತಿ ನಿರ್ಣಯದಿಂದ ಏನು ಒಂದು ಮೋಡ ಕವಿದಂತಿದ್ದು, ಗ್ರಹಣ ಹಿಡಿದಿತ್ತು. ಅದನ್ನು ಬಿಡಿಸಬೇಕಾದರೆ ನಾನು ಎಷ್ಟು ಪ್ರಯತ್ನ ಪಟ್ಟು ನನ್ನ ಮೇಲೆ ಎಷ್ಟು ಯಾವ ಯಾವ ರೀತಿ ಧಾಳಿಗಳು ನಡೆದವು ಎಂಬ ವಿಚಾರವನ್ನು ನಾನು ಈಗ ಹೇಳಬಾಕಾಗಿಲ್ಲ. ನಾನು ಖಾಸಗಿಯಾಗಿ ಮಾತನಾಡಿದರೆ ಬಹುಶಃ ನಿಮಗೆ ಅದು ಅತ್ಯಂತ ಸಂತೋಷವಾಗಿ ಕೇಳತಕ್ಕಂತಹ ವಸ್ತುವಾಗುತ್ತದೆ. ಈ ಸದನಕ್ಕೆ ಅದು ಬೇಡ. ಈ ಸದನಕ್ಕೆ ಆದರೆ ಇದು ಮತ್ತೊಂದು ದೊಡ್ಡ ಹಕ್ಕು ಚ್ಯುತಿ ಆಗುತ್ತದೆ. ಅದನ್ನು ಇಲ್ಲಿ ತರುವುದಾದರೆ ಬೇಡ. ಮತ್ತೆ ಇನ್ನೊಂದು ಹಕ್ಕು ಚ್ಯುತಿಗೆ ಹೋಗಿ ಇನ್ನು ನಾಲ್ಕು ದಿವಸ ಸದನ ಮುಂದಕ್ಕೆ ಹೋಗುವಂತೆ ಆಗಬಾರದು. ಸುಮಾರು 12 ಜನ ಅದರ ಮೇಲೆ ಹಕ್ಕು ಚ್ಯುತಿ ತರಬೇಕಾಗುತ್ತದೆ. ಅದರಿಂದ ನಾನು ಏನು ಹೇಳುತ್ತೇನೆ ಎಂದರೆ ಮಾನ್ಯ ಅಧ್ಯಕ್ಷರೆ ಮುಖ್ಯಮಂತ್ರಿಗಳು ನಾವು ಏನು ಈಗ ಇದನ್ನು ಚರ್ಚೆಗೆ ಪ್ರಾರಂಭ ಮಾಡಿದ್ದೇವೆ ಆದರಿಂದ ಅವರು ಉತ್ತರವನ್ನು ಈಗ ತಕ್ಷಣವೇ ಕೊಡಬೇಕೆಂದು ಹೇಳಿ ತಮ್ಮ ಮೂಲಕ ಅವರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

+ ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಈಗ ಇದು ಒಂದು ಅತ್ಯಂತ ಗಂಭೀರವಾದಂತಹ ವಿಚಾರ, ನಮ್ಮ ನಾಯಕರಾದಂತಹ ಮಾನ್ಯ ಖರ್ಗೆಯವರು ಈ ವಿಚಾರವನ್ನು ಎತ್ತಿದ್ದಾರೆ. ಬಹಳ ಸಂತೋಷ ಎಂದರೆ, ಇದರ ಗಂಭೀರತೆಯನ್ನು ಸ್ವಲ್ಪ ತಡವಾಗಿ ಮಸಗಂಡರೂ ಕೂಡ ನಮ್ಮ ಬಿ.ಜೆ.ಪಿ ನಾಯಕರು ಅಧಿಕೃತ ವಿರೋಧ ಪಕ್ಷದ ನಾಯಕರು ಇದಕ್ಕೆ ಬಹಳ ಉದ್ವೇಗದಿಂದ, ಅವರಿಗೆ ನಮಗಿಂತರೂ ಉದ್ವೇಗ ಅವರಲ್ಲಿ ಜಾಸ್ತಿಯಾಗಿದೆ. ಆ ಉದ್ವೇಗದ ಕಾವ

ತಡೆಯಲಾರದೆ ಬಾವಿಗೆ ಬಿದ್ದೇ ಬಿಟ್ಟರು. ನಾವು ಅವರ ವಿಷಯದಲ್ಲಿ ತಪ್ಪು ತಿಳುವಳಿಕೆ ಇಲ್ಲ. ನಮ್ಮ ವಿಚಾರಕ್ಕೆ ಬೆಂಬಲ ಕೊಟ್ಟು ಅವರು ಮಾಡಿದ್ದರಿಂದ ನಮ್ಮ ಬೆಂಬಲವಾಗಿ ಪಾಪ ಅವರು ಭಾವಿಗೆ ಬಿದ್ದರಲ್ಲಾ ಎಂದು ವಿಶೇಷವಾದ ಮಮಕಾರ ನಮಗೆ ಇದೆ. ಅದರಿಂದ ತಾವು ಅವರ ಮೇಲೆ ವಿರೋಧ ಪಕ್ಷದ ನಾಯಕರ ಮೇಲೆ ಹೇಳಿದ ಹಾಗೆ ನಮಗೆ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಪಾಪ ನಮಗಾಗಿ ಬಾವಿಗೆ ಬಿದ್ದಿದ್ದಾರೆ. ಆದ್ದರಿಂದ ಎಷ್ಟೇ, ಕೈ ಜಾರಿ, ಕಾಲು ಜಾರಿ, ಕಣ್ಣು ತಪ್ಪಿಬಿದ್ದರೂ ಕೂಡ ಅವರ ಮೇಲೆ ನಾವು ವಿಶೇಷವಾಗಿ ಮಮಕಾರ ತೋರಿಸಬೇಕಾಗುತ್ತದೆ. ಆದರೆ ವಿಷಯದ ಗಂಭೀರತೆಯ ವಿಚಾರವನ್ನು ನಾನು ಇವತ್ತು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಸಾರ್ವಜನಿಕರ ಗಮನ ಸೆಳೆದಿದೆ ಆ ಸದನದಲ್ಲಿ ಸಾಕಷ್ಟು ಗಂಭೀರವಾದಂತಹ ಚರ್ಚೆ ನಡೆದಿದೆ. ಈ ವಿವರಗಳು ಸಾಕಷ್ಟು ಈಗ ಪ್ರಕಟಣೆ ಆಗಿದೆ. ಆದರೆ ಈ ವಿಚಾರವನ್ನು ಪ್ರಸ್ತಾಪ ಮಾಡಿದ ತಕ್ಷಣ ಉತ್ತರ ಕೊಡಬೇಕೆಂದರೆ ಮಾನ್ಯ ಮಂತ್ರಿಗಳೂ ಕೂಡ ಇಲ್ಲಿದ್ದಾರೆ, ಉತ್ತರ ಕೊಡಬಹುದು. ಮಾನ್ಯ ಸಭಾ-ನಾಯಕರ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಯವರ ಉತ್ತರವನ್ನು ನಾವು ನಿರೀಕ್ಷೆ ಮಾಡುತ್ತೇವೆ. ನಾವು ಇವರ ಉತ್ತರವನ್ನು ನಿರೀಕ್ಷೆ ಮಾಡುವುದಿಲ್ಲ. ಏಕೆಂದರೆ ಇದರಲ್ಲಿ ಸರ್ಕ್ಯೂಲರ್ ನಾವು ನೋಡಿದ್ದೇವೆ. ಅಲ್ಲಿ ನಡೆದಿದ್ದ ವಿದ್ಯಾಮಾನಗಳನ್ನು ನಾವು ನೋಡಿದ ಮೇಲೆ ಬಹುಶಃ ಮಾನ್ಯ ಸಚಿವರ ಉತ್ತರವನ್ನು ಇದರ ಬಗ್ಗೆ ನಾವು ನಿರೀಕ್ಷೆ ಮಾಡುವುದಿಲ್ಲ. ನಾವು ಮಾನ್ಯ ಮುಖ್ಯಮಂತ್ರಿಗಳ ಉತ್ತರವನ್ನೇ ನಾವು ನಿರೀಕ್ಷೆ ಮಾಡಿದ್ದೇವೆ. ಅಲ್ಲಿ ಕೆಲವು ಡಿಮ್ಯಾಂಡ್ ಮಾಡಿದ್ದಾರೆ, ಅದರಲ್ಲಿ ಕೆಲವು ಬೇಡಿಕೆಗಳು ಆ ಸದನದಲ್ಲಿ ನಮ್ಮ ಪಕ್ಷದವರೇ ಸಲ್ಲಿಸಿದ್ದಾರೆ. ಆದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳವರು ನಿನ್ನೆ ಬೆಂಗಳೂರಿನಲ್ಲಿ ಇರಲಿಲ್ಲ, ಡೆಲ್ಲಿಗೆ ಹೋಗಿದ್ದರು. ಇವತ್ತು ಬೆಳಿಗ್ಗೆ ತಾವು ಬಂದಿದ್ದೀರಿ. ಉತ್ತರವನ್ನು ಕೊಡುತ್ತೀರಿ ಎಂಬ ಒಂದು ನಿರೀಕ್ಷೆಯಿಂದ ನಾವು ಇವತ್ತು ಕುಳಿತ್ತುಕೊಳ್ಳುತ್ತೇವೆ. ಆದರೆ ಇಂತಹ ಪ್ರಸಂಗಗಳು ಇವತ್ತು ಯಾರಾಗಲೂ ಕೂಡ ನಡೆದಿಲ್ಲ. ಉನ್ನತವಾದಂತಹ ಒಬ್ಬ ಅಧಿಕಾರಿ ಇವತ್ತು ಮಂತ್ರಿಗಳಿಂದ ಕೊಡತಕ್ಕಂತಹ ಓರಲ್ ಇನಸ್ಟ್ರಕ್ಷನ್ಸ್ ನೀವು ಕೇಳಬೇಡಿ, ಇದರಿಂದ ಸಾಕಷ್ಟು ಅನಾಹುತ ಆಗಿದೆ. ಪರ್ಮಿಟ್ ಇಷ್ಯೂ ಆಗಿದೆ, ಕೋಟ್ಯಾಂತರ ರೂಪಾಯಿ ನಷ್ಟು ಆಗತಕ್ಕಂತಹ ಪರಿಸ್ಥಿತಿ ಎಂದು ಇವತ್ತು ಹೇಳಿದಾಗ ಇದು ಅತ್ಯಂತ ಗಂಭೀರವಾಗಿ ಇದಕ್ಕೆ ಸಮಂಜಸವಾಗಿ ವಿಚಾರ ಮಾಡಿ ಇವತ್ತು ಅಥವಾ ನಾಳೆ ಉತ್ತರ ಹೇಳುತ್ತೀರೋ, ನಾಳೆ ಉತ್ತರ ಹೇಳಿ, ಪ್ರಶ್ನೋತ್ತರ ವೇಳೆ ಆದ ಕೂಡಲೇ ತಾವು ದಯಮಾಡಿ ಇದರ ಬಗ್ಗೆ ಉತ್ತರ ಕೊಡಬೇಕು. ಆ ಮೇಲೆ ಉತ್ತರ ಸಮಂಜಸ ಆಗದಿದ್ದರೆ ನಾವು ನಮ್ಮ ಏನು ಕಾರ್ಯಕ್ರ ತೆಗೆದುಕೊಳ್ಳಬೇಕೋ we will definitely take. ಈ ವಿಚಾರದ ಬಗ್ಗೆ ತಕ್ಷಣ ಇದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ತಾವು ಸ್ವಾಧೀನ ಪಡಿಸಿಕೊಳ್ಳಬೇಕು. ಏಕೆಂದರೆ it is likely that the documents may be suppressed. ಬಹುಶಃ ದಾಖಲೆಗಳನ್ನು ಮರೆಮಾಚಬಹುದು. ಮತ್ತು ಸಂಬಂಧಪಟ್ಟ ಅಧಿಕಾರಗಳನ್ನು (ಈ ಸಂದರ್ಭದಲ್ಲಿ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು) ಬೆದರಿಸತಕ್ಕಂತಹ ಕಾರ್ಯಕ್ರಮಗಳೂ ಕೂಡ ನೆಡಯಬಹುದು. ಆದರಿಂದ ಇದಕ್ಕೆ ನಾಳೆ ಬೆಳಿಗ್ಗೆ ಉತ್ತರ ಕೊಡಬೇಕು. ಉತ್ತರ ಕೊಡುವುದಕ್ಕೆ ತಯಾರು ಇದ್ದರೆ ಇವತ್ತು ಕೊಡಿ ಅಥವಾ ನಾಳೆ ಪ್ರಶ್ನೋತ್ತರ ವೇಳೆ ಆದ ಮೇಲೆ ತಾವು ಉತ್ತರ ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

5.00 ಪಿ.ಎಂ

+ ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ಹಿರಿಯ ಮುಖಂಡರಾಗಿರುವ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸದನದಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಾ ಗಣಿ ಇಲಾಖೆಯಲ್ಲಿ ನಿರ್ದೇಶನಗಳಲ್ಲಿ ಕೊಟ್ಟಿರುವ ಸುತ್ತೋಲೆಯ ದಿನಾಂಕ 22ನೇ ಜುಲೈ 95 ಮತ್ತು ಆ ಸುತ್ತೋಲೆ ಕೊಡುವುದಕ್ಕೆ ಇದ್ದಂಥ ಪ್ರಬಲವಾದ ಕಾರಣ ಏನು ಏನು? ಏತಕ್ಕಕೋಸ್ಕರ ಕೊಟ್ಟಿದ್ದಾರೆ? ಎಲ್ಲಿ ಹಸ್ತಕ್ಷೇಪವಾಗಿದೆ? ಇದರ ವಿವರಣೆ ನೀಡಬೇಕೆಂದು ಕೇಳಿದ್ದಾರೆ. ಇದರ ಜೊತೆಗೆ ಗ್ರಾನೈಟ್ ಕಲ್ಲುಗಳನ್ನು ಸಾಗಿಸುವುದಕ್ಕೆ ಸರ್ಕಾರ ಸುಮಾರು 400ಕ್ಕೂ ಹೆಚ್ಚು ರಹದಾರಿ ಪತ್ರಗಳನ್ನು ಇಂತಿಂಥ ದಿನಾಂಕಗಳಲ್ಲಿ ಕೊಟ್ಟಿದೆಯೆಂದು ಕೂಡ ಹೇಳಿದರು. ನಾನು ಸದನವನ್ನು ತಪ್ಪು ದಾರಿಗೆಳೆಯಲು ಸಿದ್ಧನಿಲ್ಲ. ಏಕೆಂದರೆ, ನಾನು ಇದಕ್ಕೆ ಉತ್ತರ ಕೊಡುವುದಕ್ಕೆ ಸಿದ್ಧನಾಗಿ ಬಂದಿಲ್ಲ. ಕೆಲವು ಮಾಹಿತಿಗಳಿವೆ, ಆದರೆ, ಈ ಮಾಹಿತಿಗಳನ್ನು ಕೊಡುವಾಗ ಎಷ್ಟು ಜನ ಅಧಿಕಾರಿಗಳನ್ನು ಅಮಾನತ್ತಿನಲ್ಲಿರಿಸಿದ್ದೇವೆ ಎಂಬುದನ್ನೆಲ್ಲಾ ಹೇಳಬೇಕಾಗಿದೆ. ಉದಾಹರಣೆಗೆ, ಈಗ ಜಾಲಪ್ಪನವರು, ತಮ್ಮ ಕಂದಾಯ ಇಲಾಖೆಯಲ್ಲಿ (ಎನ್.ಓ.ಸಿ.) ಕೊಡುವುದಕ್ಕೆ ಕೆಲವು ಅಧಿಕಾರಿಗಳು, ಕಂದಾಯ ಜಮೀನನ್ನು ಅರಣ್ಯ ಜಮೀನನ್ನಾಗಿ, ಅರಣ್ಯ ಜಮೀನನ್ನು ಕಂದಾಯ ಜಮೀನಾಗಿ, ಪಟ್ಟಾ ಜಮೀನನ್ನಾಗಿ ತಮ್ಮ ಮನಸ್ಸಿಗೆ ಬಂದಂತೆ ಬರೆದುಕೊಟ್ಟಿದ್ದರಿಂದ ಆ ಇಲಾಖೆಯಲ್ಲೂ ಕೆಲವು ಅಧಿಕಾರಿಗಳನ್ನು ಅಮಾನತ್ತು ಗೊಳಿಸಿದ್ದಾರೆ. ಜೊತೆಗೆ ಅರಣ್ಯಾಧಿಕಾರಿಗಳನ್ನೂ ಅಮಾನತ್ತುಗೊಳಿಸಿದ್ದೇವೆ, ಈ ಎಲ್ಲಾ ವಿಷಯಗಳ ಬಗ್ಗೆ ಸಂಪೂರ್ಣವಾಗಿ ಎಲ್ಲಾ ವಿಷಯಗಳನ್ನು ಅಳವಡಿಸಿದಂಥ ಒಂದು ಸುದೀರ್ಘ ಹೇಳಿಕೆ ಕೊಡಲು ನಾನು ಸಿದ್ಧನಿದ್ದೇನೆ. ಆದರೆ, ಈಗ ನಾನು ತಕ್ಷಣವೇ ಇಲ್ಲಿ ಒಂದು ಹೇಳಿಕೆ ಕೊಡುವುದರ ಮುಖಾಂತರ ಏನಾದರೂ ಹೇಳಿ ಸತ್ಯಕ್ಕೆ ದೂರವಾದ ಅಂಶವಿದ್ದರೆ ನಾನು ಮತ್ತೆ ಸದನದ ಮುಂದೆ ಕರ್ತವ್ಯಲೋಪವೆಸಗಿದಂತಾಗುತ್ತದೆ. ಅದಕ್ಕೋಸ್ಕರ ನಾಳೆ ಪ್ರಶ್ನೋತ್ತರ ಅವಧಿ ಮುಗಿದ ಬಳಿಕ ನೀವು ಏನೇನು ಹೇಳಿದ್ದೀರೋ ಆ ಎಲ್ಲಾ ವಿಷಯಗಳ ಬಗ್ಗೆಯೂ ಸರ್ಕಾರ ಸಂಪೂರ್ಣ ಹೇಳಿಕೆ ಕೊಡುತ್ತೇನೆ, ನಾನು ಹೇಳಿಕೆ ಕೊಡಲು ಸಿದ್ಧವಿದೆ. ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಾದರೆ ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಗುಲ್ಬರ್ಗಾದಲ್ಲಿ ಯಾರಿಗೋ ರಕ್ಷಣೆ ಕೊಡುವುದಕ್ಕೋಸ್ಕರ ಮದನಗೋಪಾಲ್ ಅವರನ್ನು ಅಲ್ಲಿ ನೇಮಿಸಿದರು. ಎಂದು ವಿರೋಧ ಪಕ್ಷದ ನಾಯಕರು ಒಂದು ಹೇಳಿಕೆ ಕೊಟ್ಟರು, ಅಲ್ಲದೆ, 'ದೇವೇಗೌಡರು ಅವರನ್ನು ವರ್ಗ ಮಾಡಿರುವ ಉದ್ದೇಶವೇ ಬೇರೆಯದಾಗಿದೆ' ಎಂತಲೂ ಹೇಳಿದರು. ಇಮೊತ್ತು ನಾನು ಇದರ ಕುರಿತು ಹೇಳುವುದಾದರೆ, ಮೂರು ದಿವಸಗಳ ಹಿಂದೆ ಮುಂಜಾನೆ 5.30 ಗಂಟೆಗೆ ನನ್ನ ಮನೆಗೆ ಮದನಗೋಪಾಲ್ ಅವರನ್ನು ಕರೆಯಿಸಿ 'ಮಂಗಳೂರು ಬಂದರಿನಲ್ಲಿ ಎಷ್ಟು ಗ್ರಾನೈಟ್ ಕಲ್ಲುಗಳ ದಿಮ್ಮಿಗಳಿವೆಯೋ, ತಾವು ಅಲ್ಲಿಗೆ ಹೋಗಿ ಪ್ರತಿಯೊಂದನ್ನೂ ತನಿಖೆ ಮಾಡಿಕೊಂಡು ಬರಬೇಕು' ಎಂದು ಸೂಚನೆ ಕೊಟ್ಟು ಕಳುಹಿಸಿದೆ. ಅರಣ್ಯ ಇಲಾಖಾಧಿಕಾರಿಯನ್ನು ಅಮಾನತ್ತುಗೊಳಿಸುವ ನಿರ್ಣಯವನ್ನೂ ನಾನೇ ಮಾಡಿದ್ದೇನೆ. ಅವರು ಅಲ್ಲಿ ತನಿಖೆ ಮುಗಿಸಿ ನಾಳೆ ಬೆಳಿಗ್ಗೆ ಬರಬಹುದು. ಅವರು ಬರಲಿ, ಬಿಡಲಿ ಆ ವಿಷಯ ಬೇರೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಯಾರ

ಮುಲಾಜಿಗೂ ಭಾಗಿಯಾಗಿಲ್ಲ. ಅವರು ಯಾವ ಪಕ್ಷದವರೇ ಇರಲಿ, ಯಾವ ದೊಡ್ಡ ಮುಖಂಡರೇ ಇರಲಿ, 'ನಮ್ಮ ಕಡೆ ಯಾರೋ ಇದ್ದಾರೆ' ಎಂದು ಪತ್ರಿಕೆಯಲ್ಲಿ ನೋಡಿದೆ. ಹೀಗೆ ಒಂದೊಂದು ಸಲ ಇದು ಎಲ್ಲಿಯವರೆಗೆ ಹೋಗುತ್ತದೆಂದರೆ farfetched ideas ನಿಂದ ನಾವು ಬಹಳ ದೂರ ಹೋಗಿಬಿಡುತ್ತೇವೆ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಾನು ಮದನಗೋಪಾಲ್ ಎಂಬ ಅಧಿಕಾರಿಯನ್ನು ಕರೆಯಿಸಿ ನೀವು ಯಾವ ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ಈಗ ಅವರು ಯಾವ ಸುತ್ತೋಲೆ ಕಳುಹಿಸಿದ್ದಾರೋ, ಅದರ ಬಗ್ಗೆ ನಾನು ನಾಳೆ ಹೇಳಿಕೆ ಕೊಡುತ್ತೇನೆ. ಈ ವಿಷಯದಲ್ಲಿ ನಾವು ಯಾರಿಗೂ ತಲೆಬಾಗಬೇಕಾದ ಅವಶ್ಯಕತೆಯಿಲ್ಲ. ನಾನು ಉತ್ತರ ಕೊಟ್ಟ ಬಳಿಕವೂ ನನ್ನ ಹೇಳಿಕೆ ಮೇಲೆ ನೀವು ಇನ್ನೂ ಚರ್ಚೆಯಾಗಬೇಕೆಂದರೆ ಅದಕ್ಕೂ ನಾನು ಉಪಾಧ್ಯಕ್ಷರಲ್ಲಿ ವಿನಂತಿಸಿಕೊಳ್ಳುತ್ತೇನೆ. ತಾವು ಇದಕ್ಕೆ ಕಾಲ ನಿಗದಿಮಾಡಿ, ನಾಳೆ ನಾನೂ ತಯಾರಿದ್ದೇನೆ, ಚರ್ಚೆಯಾಗಲಿ. ಇದು ರಾಜ್ಯದ ಎಲ್ಲಾ ಜನತೆಗೆ ಸಂಬಂಧಿಸಿದ ಸಂಪತ್ತಾಗಿರುವುದರಿಂದ ಇದನ್ನು ಕಬಳಿಸುವುದಕ್ಕೆ ಸರ್ಕಾರ ಬಿಡುವುದಿಲ್ಲ. ಇಷ್ಟಕ್ಕೆ ನನಗೆ ತೃಪ್ತಿ ಇಲ್ಲವಾದ್ದರಿಂದ ನಾಳೆ ಇದರ ಬಗ್ಗೆ ಸುದೀರ್ಘವಾದ ಹೇಳಿಕೆ ಕೊಡಲು ಸಿದ್ಧನಿದ್ದೇನೆ.

ಗಮನ ಸೆಳೆಯುವ ಸೂಚನೆಗಳು

ರಾಜ್ಯದಲ್ಲಿರುವ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಮಿತಿಯನ್ನು ಕಡಿಮೆಗೊಳಿಸಿರುವುದರಿಂದ ಉಂಟಾಗಿರುವ ತೊಂದರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿರುವ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಮಿತಿಯನ್ನು ಕಡಿಮೆಗೊಳಿಸಿರುವುದರಿಂದ ಉಂಟಾಗಿರುವ ತೊಂದರೆ ಬಗ್ಗೆ ನಾನು ಉಪ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಉಪಾಧ್ಯಕ್ಷರು : ಇದರ ಬಗ್ಗೆ ಹೇಳಿಕೆ ಕೊಡಲು ಸನ್ಮಾನ್ಯ ಉಪ ಮುಖ್ಯಮಂತ್ರಿಯವರು ಈಗ ಸದನದಲ್ಲಿಲ್ಲದಿರುವುದರಿಂದ ನಾಳೆ ಮತ್ತೆ ಇದನ್ನು ತೆಗೆದುಕೊಳ್ಳೋಣ.

ರಾಜ್ಯ ಸರ್ಕಾರ ಪಡಿತರ ಪದ್ಧತಿಯಲ್ಲಿ ಸರಬರಾಜು ಮಾಡುತ್ತಿರುವ ಗೋಧಿಗೆ ಕಡಿಮೆ ಸಹಾಯಧನ ನೀಡುತ್ತಿರುವುದರಿಂದ ಸಾರ್ವಜನಿಕರಿಗೆ ಆದರಲ್ಲೂ ಉತ್ತರ ಕರ್ನಾಟಕದ ಜನತೆಗೆ ಉಂಟಾಗಿರುವ ತೊಂದರೆ.

ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಉಪಾಧ್ಯಕ್ಷರೆ, ರಾಜ್ಯ ಸರ್ಕಾರ ಪಡಿತರ ಪದ್ಧತಿಯಲ್ಲಿ ಸರಬರಾಜು ಮಾಡುತ್ತಿರುವ ಗೋಧಿಗೆ ಕಡಿಮೆ ಸಹಾಯಧನ ನೀಡುತ್ತಿರುವುದರಿಂದ ಸಾರ್ವಜನಿಕರಿಗೆ ಆದರಲ್ಲೂ ಉತ್ತರ ಕರ್ನಾಟಕ ಜನತೆಗೆ ಉಂಟಾಗಿರುವ ತೊಂದರೆ ಬಗ್ಗೆ ನಾನು ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಸ್. ನಂಜಪ್ಪ : (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರುಗಳಾದ ಶ್ರೀ ಡಿ.ಆರ್. ಪಾಟೀಲ್, ಬಿ. ಶಿವರಾಮು, ಬಿ.ಎಸ್.